سُوْرَةُ الْقَصَصِ مَكِّيَّةٌ — اٰيَاتُهَا ٨٨ — رُكُوْعَاتُهَا ٩

ಸೂ. 88 — ರು. 9

28. ಅಲ್ ಕಸಸ್

(ಅವತೀರ್ಣ - ಮಕ್ಕಾದಲ್ಲಿ)

بِسْمِ اللّٰهِ الرَّحْمٰنِ الرَّحِيْمِ ○

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

طٰسٓمّٓ ①

1. ತಾ ಸೀ ಮ್ಮೀಮ್.

تِلْكَ اٰيٰتُ الْكِتٰبِ الْمُبِيْنِ ②

2. ಇವು ಸುವ್ಯಕ್ತ ಗ್ರಂಥದ ಸೂಕ್ತಗಳು.

نَتْلُوْا عَلَيْكَ مِنْ نَّبَاِ مُوْسٰى وَفِرْعَوْنَ بِالْحَقِّ لِقَوْمٍ يُّؤْمِنُوْنَ ③

3. ನಾವು ನಿಮಗೆ ಮೂಸಾ ಮತ್ತು ಫಿರ್‌ಔನರ ಕೆಲವು ವೃತ್ತಾಂತ ಗಳನ್ನು ನಿಖರವಾಗಿ ತಿಳಿಸುತ್ತೇವೆ- ಸತ್ಯವಿಶ್ವಾಸ ಸ್ವೀಕರಿಸುವವರ ಪ್ರಯೋಜನಕ್ಕಾಗಿ.

اِنَّ فِرْعَوْنَ عَلَا فِى الْاَرْضِ وَجَعَلَ اَهْلَهَا شِيَعًا يَّسْتَضْعِفُ طَآئِفَةً مِّنْهُمْ يُذَبِّحُ اَبْنَآءَهُمْ وَيَسْتَحْيٖ نِسَآءَهُمْ ؕ اِنَّهٗ كَانَ مِنَ الْمُفْسِدِيْنَ ④

4. ವಿಷಯವೇನೆಂದರೆ- ಫಿರ್‌ಔನನು ಭೂಮಿಯಲ್ಲಿ ಬಂಡಾಯವೆದ್ದನು ಮತ್ತು ಅದರ ನಿವಾಸಿಗಳನ್ನು ಪಂಗಡಗಳಾಗಿ ವಿಂಗಡಿಸಿ ಬಿಟ್ಟನು. ಆ ಪೈಕಿ ಒಂದು ಪಂಗಡವನ್ನು ಅವನು ಅವಮಾನಿಸುತ್ತಿದ್ದನು. ಅವರ ಗಂಡು ಮಕ್ಕಳನ್ನು ವಧಿಸುತ್ತಿದ್ದನು ಮತ್ತು ಹೆಣ್ಣು ಮಕ್ಕಳನ್ನು ಬದುಕಿರಲು ಬಿಡುತ್ತಿದ್ದನು. ನಿಜಕ್ಕೂ ಅವನು ದಂಗೆಕೋರರಲ್ಲಾಗಿದ್ದನು.

وَنُرِيْدُ اَنْ نَّمُنَّ عَلَى الَّذِيْنَ اسْتُضْعِفُوْا فِى الْاَرْضِ وَنَجْعَلَهُمْ اَئِمَّةً وَّنَجْعَلَهُمُ الْوٰرِثِيْنَ ⑤

5. ನಾವು ಭೂಮಿಯಲ್ಲಿ ತುಳಿಯಲ್ಪಟ್ಟವರ ಮೇಲೆ ಕೃಪೆ ತೋರಬೇಕೆಂದೂ ಅವರನ್ನು ನಾಯಕರಾಗಿ ಮಾಡಿ ಬಿಡಬೇಕೆಂದೂ ಅವರನ್ನೇ ಉತ್ತರಾಧಿಕಾರಿಗಳಾಗಿ ಮಾಡಬೇಕೆಂದೂ-

وَنُمَكِّنَ لَهُمْ فِى الْاَرْضِ وَنُرِىَ فِرْعَوْنَ وَهَامٰنَ وَجُنُوْدَهُمَا مِنْهُمْ مَّا كَانُوْا يَحْذَرُوْنَ ⑥

6. ಭೂಮಿಯಲ್ಲಿ ಅವರಿಗೆ ಪ್ರಭುತ್ವ ನೀಡಬೇಕೆಂದೂ ಫಿರ್‌ಔನ್, ಹಾಮಾನ್ ಮತ್ತು ಅವರ ಸೇನೆಗಳಿಗೆ ಯಾವುದರ ಭಯವಿತ್ತೋ ಅದನ್ನೇ ತೋರಿಸಿಕೊಡಬೇಕೆಂದೂ ಬಯಸಿದ್ದೆವು.

وَاَوْحَيْنَآ اِلٰٓى اُمِّ مُوْسٰٓى اَنْ اَرْضِعِيْهِ ۚ

7. ನಾವು ಮೂಸಾರ ತಾಯಿಗೆ, "ಇದಕ್ಕೆ ಮೊಲೆಹಾಲುಣಿಸು.

ಮುಂದೆ ನಿನಗೆ ಇದರ ಪ್ರಾಣದ ಬಗ್ಗೆ ಭಯವುಂಟಾದರೆ ಇದನ್ನು ನದಿಯಲ್ಲಿ ಹಾಕಿ ಬಿಡು. ನೀನು ಕೊಂಚವೂ ಭಯ ಪಡಬೇಡ. ವ್ಯಥೆ ಪಡಬೇಡ. ನಾವು ಇದನ್ನು ನಿನ್ನ ಬಳಿಗೇ ಮರಳಿ ತರುವೆವು ಮತ್ತು ಇದನ್ನು ಸಂದೇಶವಾಹಕರಲ್ಲಿ ಸೇರಿಸುವೆವು" ಎಂದು ಸೂಚನೆ ನೀಡಿದೆವು.[1]

فَإِذَا خِفْتِ عَلَيْهِ فَأَلْقِيهِ فِي الْيَمِّ
وَلَا تَخَافِي وَلَا تَحْزَنِي ۖ إِنَّا رَادُّوهُ
إِلَيْكِ وَجَاعِلُوهُ مِنَ الْمُرْسَلِينَ ⑦

8. ಕೊನೆಗೆ ಫಿರ್‌ಔನನ ಮನೆಯವರು- ತಮ್ಮ ಶತ್ರುವಾಗಲು ಮತ್ತು ತಮ್ಮ ವ್ಯಥೆಗೆ ಕಾರಣವಾಗಲು ಅದನ್ನು (ನದಿಯಿಂದ) ಎತ್ತಿಕೊಂಡರು. ನಿಜಕ್ಕೂ ಫಿರ್‌ಔನನೂ ಹಾಮಾನನೂ ಅವನ ಸೇನೆಗಳೂ (ತಮ್ಮ ತಂತ್ರದಲ್ಲಿ) ತಪ್ಪಿ ಬಿದ್ದಿದ್ದರು.

فَالْتَقَطَهُ آلُ فِرْعَوْنَ لِيَكُونَ لَهُمْ عَدُوًّا
وَحَزَنًا ۗ إِنَّ فِرْعَوْنَ وَهَامَانَ
وَجُنُودَهُمَا كَانُوا خَاطِئِينَ ⑧

9. ಫಿರ್‌ಔನನ ಪತ್ನಿಯು (ಅವನೊಡನೆ) "ಇದು ನನಗೂ, ನಿನಗೂ ಕಣ್ಮನಗಳಿಗೆ ತಂಪಾಗಿದೆ. ಇದನ್ನು ವಧಿಸಬೇಡ. ಇದು ನಮಗೆ ಲಾಭದಾಯಕವಾಗಲೂಬಹುದು ಅಥವಾ ನಾವು ಇದನ್ನು ಮಗನಾಗಿ ಮಾಡಿಕೊಳ್ಳಲೂಬಹುದು" ಎಂದಳು. ಅವರು (ಪರಿಣಾಮದ ಬಗ್ಗೆ) ಅಜ್ಞರಾಗಿದ್ದರು.

وَقَالَتِ امْرَأَتُ فِرْعَوْنَ قُرَّتُ عَيْنٍ
لِي وَلَكَ ۖ لَا تَقْتُلُوهُ عَسَىٰ أَنْ يَنْفَعَنَا
أَوْ نَتَّخِذَهُ وَلَدًا وَهُمْ لَا يَشْعُرُونَ ⑨

10. ಅತ್ತ 'ಮೂಸಾ'ರ ತಾಯಿಯ ಹೃದಯ ತಳಮಳಿಸುತ್ತಿತ್ತು. ಅವಳು (ನಮ್ಮ ವಾಗ್ದಾನದ ಮೇಲೆ) ವಿಶ್ವಾಸವಿರಿಸುವವರಲ್ಲಾಗಲೆಂದು ನಾವು ಅವಳಿಗೆ ಸಾಂತ್ವನ ನೀಡದಿರುತ್ತಿದ್ದರೆ ಅವಳು ಗುಟ್ಟನ್ನು ರಟ್ಟುಮಾಡಿ ಬಿಡುತ್ತಿದ್ದಳು.

وَأَصْبَحَ فُؤَادُ أُمِّ مُوسَىٰ فَارِغًا ۖ إِنْ
كَادَتْ لَتُبْدِي بِهِ لَوْلَا أَنْ رَبَطْنَا عَلَىٰ
قَلْبِهَا لِتَكُونَ مِنَ الْمُؤْمِنِينَ ⑩

11. ಅವಳು ಮಗುವಿನ ಸಹೋದರಿಯೊಡನೆ ಅದರ ಹಿಂದೆಯೇ ಹೋಗೆಂದಳು. ಆ ಪ್ರಕಾರ ಅವಳು (ಶತ್ರುಗಳಿಗೆ) ಅದರ ಸುಳಿವು ಸಿಗದ ರೀತಿಯಲ್ಲಿ ಬದಿಯಿಂದ ನೋಡುತ್ತಲೇ ಇದ್ದಳು-

وَقَالَتْ لِأُخْتِهِ قُصِّيهِ ۖ فَبَصُرَتْ بِهِ
عَنْ جُنُبٍ وَهُمْ لَا يَشْعُرُونَ ⑪

12. ಮತ್ತು ನಾವು ಆ ಮಗುವಿನ ಪಾಲಿಗೆ ಹಾಲುಣಿಸುವ ಸ್ತ್ರೀಯರ ಸ್ತನಗಳನ್ನು ಮೊದಲೇ ನಿಷಿದ್ಧಗೊಳಿಸಿ ಬಿಟ್ಟಿದ್ದೆವು. (ಇದನ್ನು ಕಂಡು) ಆ ಹುಡುಗಿಯು ಅವರೊಡನೆ, "ಹಿತಾಕಾಂಕ್ಷೆಯೊಂದಿಗೆ ಇದರ ಪೋಷಣೆಯ ಹೊಣೆ ವಹಿಸತಕ್ಕಂತಹ ಮನೆಯವರನ್ನು ನಾನು ನಿಮಗೆ ತೋರಿಸಿ ಕೊಡಲೇ?" ಎಂದು ಕೇಳಿದಳು.

وَحَرَّمْنَا عَلَيْهِ الْمَرَاضِعَ مِنْ قَبْلُ
فَقَالَتْ هَلْ أَدُلُّكُمْ عَلَىٰ أَهْلِ بَيْتٍ
يَكْفُلُونَهُ لَكُمْ وَهُمْ لَهُ نَاصِحُونَ ⑫

13. ಈ ರೀತಿ ನಾವು ಮೂಸಾರನ್ನು ಅವರ ಮಾತೆಯ ಬಳಿಗೆ ಮರಳಿಸಿ

فَرَدَدْنَاهُ إِلَىٰ أُمِّهِ كَيْ تَقَرَّ عَيْنُهَا

---

1. ಇಂತಹುದೇ ಸನ್ನಿವೇಶದಲ್ಲಿ ಇಸ್ರಾಈಲರ ಪೈಕಿಯ ಒಂದು ಮನೆತನದಲ್ಲಿ ಮಗುವೊಂದು ಹುಟ್ಟಿತು. ಅದನ್ನೇ ಜಗತ್ತು ಮೂಸಾ(ಅ) ಎಂಬ ಹೆಸರಿನಿಂದ ಅರಿಯಿತು ಎಂಬ ವಿಷಯವನ್ನು ನಡುವೆ ಬಿಟ್ಟು ಬಿಡಲಾಗಿದೆ.

ದೇವು. ಆಕೆಯ ಕಣ್ಣುಗಳು ತಂಪಾಗಲೆಂದು, ಆಕೆ ದುಃಖಿಸದಿರಲೆಂದು ಮತ್ತು ಅಲ್ಲಾಹನ ವಾಗ್ದಾನವು ಸತ್ಯವಾಗಿತ್ತೆಂಬುದನ್ನು ಆಕೆ ತಿಳಿಯಲೆಂದು. ಆದರೆ ಹೆಚ್ಚಿನವರು ಇದನ್ನು ತಿಳಿಯುವುದಿಲ್ಲ.

وَلَا تَحْزَنَ وَلِتَعْلَمَ اَنَّ وَعْدَ اللّٰهِ
حَقٌّ وَّلٰكِنَّ اَكْثَرَهُمْ لَا يَعْلَمُوْنَ ﴿١٣﴾

14. ಮೂಸಾ ತಮ್ಮ ತುಂಬು ಯೌವನಕ್ಕೆ ತಲಪಿದಾಗ ಹಾಗೂ ಅವರ ಬೆಳವಣಿಗೆ ಪೂರ್ತಿಗೊಂಡಾಗ ನಾವು ಅವರಿಗೆ 'ನಿರ್ಧಾರಶಕ್ತಿ' ಯನ್ನೂ ಜ್ಞಾನವನ್ನೂ ನೀಡಿದೆವು. ನಾವು ಸಜ್ಜನರಿಗೆ ಇದೇ ರೀತಿ ಸತ್ಫಲವನ್ನು ದಯಪಾಲಿಸುತ್ತೇವೆ.

وَلَمَّا بَلَغَ اَشُدَّهٗ وَاسْتَوٰٓى اٰتَيْنٰهُ
حُكْمًا وَّعِلْمًا ۭ وَكَذٰلِكَ نَجْزِى
الْمُحْسِنِيْنَ ﴿١٤﴾

15. (ಒಂದು ದಿನ) ನಗರವಾಸಿಗಳು ಅಲಕ್ಷ್ಯರಾಗಿದ್ದಾಗ ಅವರು ನಗರದೊಳಗೆ ಪ್ರವೇಶಿಸಿದರು. ಅಲ್ಲಿ ಅವರು ಇಬ್ಬರು ಜಗಳಾಡುತ್ತಿರುವುದನ್ನು ಕಂಡರು. ಒಬ್ಬನು ಅವರ ಸ್ವಂತ ಜನಾಂಗದವನಾಗಿದ್ದನು. ಇನ್ನೊಬ್ಬನು ಅವರ ಶತ್ರು ಜನಾಂಗಕ್ಕೆ ಸೇರಿದವನಾಗಿದ್ದನು. ಅವರ ಜನಾಂಗದವನು ಶತ್ರು ಜನಾಂಗದವನ ವಿರುದ್ಧ ಅವರನ್ನು ಸಹಾಯಕ್ಕಾಗಿ ಕೂಗಿದನು. ಮೂಸಾ ಅವನಿಗೆ ಒಂದು ಗುದ್ದು ಕೊಟ್ಟರು ಮತ್ತು ಅವನನ್ನು ಕೊನೆಗಾಣಿಸಿ ಬಿಟ್ಟರು. (ಈ ಕೃತ್ಯ ಸಂಭವಿಸಿ ಬಿಟ್ಟೊಡನೆ) ಮೂಸಾ, "ಇದು ಶೈತಾನನ ಕೆಲಸ. ಅವನು ಮಹಾ ಶತ್ರುವೂ ಸುಸ್ಪಷ್ಟ ದಾರಿಗೆಡಿಸುವವನೂ ಆಗಿರುತ್ತಾನೆ" ಎಂದರು.

وَدَخَلَ الْمَدِيْنَةَ عَلٰى حِيْنِ غَفْلَةٍ
مِّنْ اَهْلِهَا فَوَجَدَ فِيْهَا رَجُلَيْنِ
يَقْتَتِلٰنِ ۤ هٰذَا مِنْ شِيْعَتِهٖ وَهٰذَا
مِنْ عَدُوِّهٖ ۚ فَاسْتَغَاثَهُ الَّذِىْ مِنْ
شِيْعَتِهٖ عَلَى الَّذِىْ مِنْ عَدُوِّهٖ ۙ فَوَكَزَهٗ
مُوْسٰى فَقَضٰى عَلَيْهِ ۤ قَالَ هٰذَا مِنْ
عَمَلِ الشَّيْطٰنِ ۭ اِنَّهٗ عَدُوٌّ مُّضِلٌّ
مُّبِيْنٌ ﴿١٥﴾

16. ತರುವಾಯ ಅವರು, "ನನ್ನ ಪ್ರಭೂ, ನನ್ನ ಮೇಲೆ ನಾನೇ ಅಕ್ರಮವೆಸಗಿ ಬಿಟ್ಟೆ. ನನ್ನನ್ನು ಕ್ಷಮಿಸು" ಎಂದರು. ಆ ಪ್ರಕಾರ ಅಲ್ಲಾಹನು ಅವರನ್ನು ಕ್ಷಮಿಸಿದನು.[2] ಅವನು ಮಹಾ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

قَالَ رَبِّ اِنِّىْ ظَلَمْتُ نَفْسِىْ فَاغْفِرْ
لِىْ فَغَفَرَ لَهٗ ۭ اِنَّهٗ هُوَ الْغَفُوْرُ الرَّحِيْمُ ﴿١٦﴾

17. ಮೂಸಾ ಹೀಗೆ ಪ್ರತಿಜ್ಞೆ ಮಾಡಿದರು, "ನನ್ನ ಪ್ರಭೂ, ನೀನು ನನ್ನ ಮೇಲೆ ಈ ಉಪಕಾರವೆಸಗಿರುವೆ.[3] ಇನ್ನು ಮುಂದೆ ನಾನೆಂದೂ ಅಪರಾಧಿಗಳ ಸಹಾಯಕನಾಗಲಾರೆ."

قَالَ رَبِّ بِمَآ اَنْعَمْتَ عَلَيَّ فَلَنْ
اَكُوْنَ ظَهِيْرًا لِّلْمُجْرِمِيْنَ ﴿١٧﴾

18. ಮರುದಿನ ಮುಂಜಾನೆ ಹೆದರುತ್ತ, ಎಲ್ಲೆಲ್ಲೂ ಅಪಾಯವನ್ನೇ

فَاَصْبَحَ فِى الْمَدِيْنَةِ خَآئِفًا يَّتَرَقَّبُ

2. 'ಮಗ್ಫಿರತ್'ನ ಅರ್ಥ ಕ್ಷಮಿಸುವುದು, ಮನ್ನಿಸುವುದು ಎಂದಲ್ಲದೆ 'ಮರೆಸುವುದು' ಎಂದೂ ಆಗುತ್ತದೆ. ಹ. ಮೂಸಾರ(ಅ) ಪ್ರಾರ್ಥನೆಯ ಅರ್ಥ, "ನೀನು ತಿಳಿದಿರುವಂತೆ ನಾನು ಉದ್ದೇಶ ಪೂರ್ವಕವಾಗಿ ಮಾಡಿರದ ಪಾಪವನ್ನು ನೀನು ಮನ್ನಿಸು. ಅಂತೆಯೇ ಶತ್ರುಗಳಿಗೆ ಆ ಬಗ್ಗೆ ತಿಳಿಯದಂತೆ ಅದನ್ನು ಮರೆಯಲ್ಲಿರಿಸು" ಎಂದಾಗಿದೆ.

3. ಅರ್ಥಾತ್- ನನ್ನ ಕರ್ಮ ಮರೆಯಲ್ಲುಳಿಯಿತು. ಶತ್ರು ಸಮುದಾಯದ ಯಾವ ವ್ಯಕ್ತಿಯೂ ನನ್ನನ್ನು ನೋಡಲಿಲ್ಲ. ಹಾಗೆಯೇ ನನಗೆ ಸುರಕ್ಷಿತವಾಗಿ ಪಾರಾಗುವ ಅವಕಾಶ ಸಿಕ್ಕಿತು.

ಅನುಮಾನಿಸುತ್ತ ನಗರದಲ್ಲಿ ಹೋಗುತ್ತಿದ್ದಾಗ, ನಿನ್ನೆ ಅವರನ್ನು ಸಹಾಯಕ್ಕಾಗಿ ಕೂಗಿದ್ದ ವ್ಯಕ್ತಿಯೇ ಇಂದು ಪುನಃ ಕೂಗುತ್ತಿರುವುದನ್ನು ಕಂಡರು. ಮೂಸಾ ಅವನೊಡನೆ, "ನೀನು ಮಹಾ ದಾರಿಗೆಟ್ಟವ" ಎಂದರು.

فَإِذَا الَّذِي اسْتَنصَرَهُ بِالْأَمْسِ
يَسْتَصْرِخُهُ ۚ قَالَ لَهُ مُوسَىٰ إِنَّكَ
لَغَوِيٌّ مُّبِينٌ ﴿١٨﴾

19. ಅನಂತರ ಮೂಸಾ ಶತ್ರು ಜನಾಂಗದವನ ಮೇಲೆ ಆಕ್ರಮಣ ಮಾಡಲಿಚ್ಛಿಸಿದಾಗ ಅವನು- "ಮೂಸಾ, ನೀನು ನಿನ್ನೆ ಒಬ್ಬನನ್ನು ಕೊಲೆ ಮಾಡಿದಂತೆಯೇ ಇಂದು ನನ್ನನ್ನೂ ಕೊಲೆ ಮಾಡಲು ಹೊರಟಿರುವೆಯಾ? ನೀನು ಈ ದೇಶದಲ್ಲಿ ದೊಡ್ಡ ವಿಧ್ವಂಸಕನಾಗ ಲಿಚ್ಛಿಸುತ್ತೀ,- ಸುಧಾರಕನಾಗ ಬಯಸುವುದಿಲ್ಲ" ಎಂದು ಕೂಗಿದನು.[4]

فَلَمَّا أَنْ أَرَادَ أَن يَبْطِشَ بِالَّذِي
هُوَ عَدُوٌّ لَّهُمَا قَالَ يَا مُوسَىٰ أَتُرِيدُ
أَن تَقْتُلَنِي كَمَا قَتَلْتَ نَفْسًا بِالْأَمْسِ ۖ
إِن تُرِيدُ إِلَّا أَن تَكُونَ جَبَّارًا فِي
الْأَرْضِ وَمَا تُرِيدُ أَن تَكُونَ
مِنَ الْمُصْلِحِينَ ﴿١٩﴾

20. ಅನಂತರ ಒಬ್ಬನು ನಗರದ ಆ ತುದಿಯಿಂದ ಓಡುತ್ತಾ ಬಂದನು ಮತ್ತು "ಮೂಸಾ, ಸರದಾರರ ನಡುವೆ ನಿನ್ನನ್ನು ಕೊಲೆ ಮಾಡುವ ಸಮಾಲೋಚನೆ ನಡೆಯುತ್ತಿದೆ. ಇಲ್ಲಿಂದ ಹೊರಟು ಹೋಗಿ ಬಿಡು. ನಾನು ನಿನ್ನ ಹಿತಚಿಂತಕನಾಗಿದ್ದೇನೆ" ಎಂದು ಹೇಳಿದನು.[5]

وَجَاءَ رَجُلٌ مِّنْ أَقْصَى الْمَدِينَةِ
يَسْعَىٰ قَالَ يَا مُوسَىٰ إِنَّ الْمَلَأَ
يَأْتَمِرُونَ بِكَ لِيَقْتُلُوكَ فَاخْرُجْ
إِنِّي لَكَ مِنَ النَّاصِحِينَ ﴿٢٠﴾

21. ಈ ಸುದ್ದಿಯನ್ನು ಕೇಳಿದೊಡನೆ ಮೂಸಾ ಭಯಭೀತರಾಗಿ ಹೊರಟು ಬಿಟ್ಟರು ಮತ್ತು ಅವರು, "ನನ್ನ ಪ್ರಭೂ, ನನ್ನನ್ನು ಅಕ್ರಮಿಗಳಿಂದ ರಕ್ಷಿಸು" ಎಂದು ಪ್ರಾರ್ಥಿಸಿದರು.

فَخَرَجَ مِنْهَا خَائِفًا يَتَرَقَّبُ ۖ قَالَ رَبِّ
نَجِّنِي مِنَ الْقَوْمِ الظَّالِمِينَ ﴿٢١﴾

22. ಮೂಸಾ (ಈಜಿಪ್ಟ್‌ನಿಂದ) ಮದ್‌ಯನಿನ ಕಡೆಗೆ ಹೊರಟರು ಮತ್ತು "ನನ್ನ ಪ್ರಭು, ನನ್ನನ್ನು ಸರಿಯಾದ ಮಾರ್ಗದಲ್ಲಿ ನಡೆಸುವನೆಂಬ ನಿರೀಕ್ಷೆ ಇದೆ" ಎಂದರು.[6]

وَلَمَّا تَوَجَّهَ تِلْقَاءَ مَدْيَنَ قَالَ عَسَىٰ
رَبِّي أَن يَهْدِيَنِي سَوَاءَ السَّبِيلِ ﴿٢٢﴾

23. ಅವರು ಮದ್‌ಯನಿನ ಬಾವಿಯ ಬಳಿಗೆ ತಲುಪಿದಾಗ ಅನೇಕ ಜನರು ತಮ್ಮ ಜಾನುವಾರುಗಳಿಗೆ ನೀರು ಕುಡಿಸುತ್ತಿರುವುದನ್ನೂ

وَلَمَّا وَرَدَ مَاءَ مَدْيَنَ وَجَدَ عَلَيْهِ
أُمَّةً مِّنَ النَّاسِ يَسْقُونَ

4. ಈ ಕೂಗುವವನು, ಮೂಸಾರ(ಅ) ನೆರವಿಗೆ ಮುಂದಾಗಿದ್ದ ಪ್ರಸ್ತುತ ಇಸ್ರಾಈಲ್ ಜನಾಂಗದವನೇ ಆಗಿದ್ದನು. ಅವನನ್ನು ಗದರಿಸಿದ ನಂತರ ಅವರು ಈಜಿಪ್ಟ್‌ನವರಿಗೆ ಹೊಡೆಯಲು ಹೊರಟಾಗ ಇಸ್ರಾಈಲಿಯನು ಇವರು ತನ್ನನ್ನು ಹೊಡೆಯಲು ಬರುತ್ತಿದ್ದಾರೆಂದು ಭಾವಿಸಿದನು. ಆದ್ದರಿಂದ ಅವನು ಕೂಗಲಾರಂಭಿಸಿದನು. ಹೀಗೆ ಹಿಂದಿನ ದಿನ ಸಂಭವಿಸಿದ್ದ ವಧೆಯ ರಹಸ್ಯವನ್ನು ಅವನು ತನ್ನ ಮೂರ್ಖತನದಿಂದ ಬಯಲುಗೊಳಿಸಿ ಬಿಟ್ಟನು.

5. ಅರ್ಥಾತ್- ಈ ಎರಡನೆಯ ಜಗಳದಲ್ಲಿ ಕೊಲೆಯ ರಹಸ್ಯ ಬಯಲಾದಾಗ ಮತ್ತು ಈಜಿಪ್ಟ್‌ನವರು ಹೋಗಿ ಸುದ್ದಿ ಮುಟ್ಟಿಸಿದಾಗ ಈ ಘಟನೆ ನಡೆಯಿತು.

6. ಅರ್ಥಾತ್- ಸುರಕ್ಷಿತವಾಗಿ ಮದ್‌ಯನ್ ತಲುಪಲು ಸಾಧ್ಯವಿರುವ ಮಾರ್ಗದಲ್ಲಿ.

وَوَجَدَ مِنْ دُوْنِهِمُ امْرَاَتَيْنِ تَذُوْدٰنِ ۚ قَالَ مَا خَطْبُكُمَا ؕ قَالَتَا لَا نَسْقِيْ حَتّٰى يُصْدِرَ الرِّعَآءُ ٚ وَاَبُوْنَا شَيْخٌ كَبِيْرٌ ﴿۲۳﴾

ಅವರಿಂದ ದೂರ ಒಂದೆಡೆ ಇಬ್ಬರು ಮಹಿಳೆಯರು ತಮ್ಮ ಜಾನುವಾರುಗಳನ್ನು ತಡೆಯುತ್ತಿರುವುದನ್ನೂ ಕಂಡರು. ಮೂಸಾ ಆ ಮಹಿಳೆಯರೊಡನೆ, "ನಿಮಗೇನು ತೊಂದರೆಯಾಗಿದೆ"? ಎಂದು ಕೇಳಿದರು. ಆಗ ಅವರು, ಈ ಕುರುಬರು ತಮ್ಮ ಜಾನುವಾರುಗಳನ್ನು ಕೊಂಡು ಹೋಗುವ ವರೆಗೂ ನಾವು ನಮ್ಮ ಜಾನುವಾರುಗಳಿಗೆ ನೀರು ಕುಡಿಸುವಂತಿಲ್ಲ ಮತ್ತು ನಮ್ಮ ತಂದೆ ಓರ್ವ ಅತಿ ವೃದ್ಧರಾಗಿದ್ದಾರೆ ಎಂದರು.

فَسَقٰى لَهُمَا ثُمَّ تَوَلّٰۤى اِلَى الظِّلِّ فَقَالَ رَبِّ اِنِّيْ لِمَآ اَنْزَلْتَ اِلَيَّ مِنْ خَيْرٍ فَقِيْرٌ ﴿۲۴﴾

24. ಇದನ್ನು ಕೇಳಿ ಮೂಸಾ, ಅವರ ಜಾನುವಾರುಗಳಿಗೆ ನೀರು ಕುಡಿಸಿದರು. ತರುವಾಯ ಒಂದು ನೆರಳಿರುವ ಜಾಗಕ್ಕೆ ಹೋಗಿ ಕುಳಿತರು ಮತ್ತು "ಪ್ರಭೂ, ನೀನು ನನ್ನ ಮೇಲೆ ಯಾವ ಹಿತವನ್ನಿಳಿಸಿದರೂ ನಾನು ಅದರ ಅಪೇಕ್ಷಕನಾಗಿದ್ದೇನೆ" ಎಂದರು.

فَجَآءَتْهُ اِحْدٰىهُمَا تَمْشِيْ عَلَى اسْتِحْيَآءٍ ؗ قَالَتْ اِنَّ اَبِيْ يَدْعُوْكَ لِيَجْزِيَكَ اَجْرَ مَا سَقَيْتَ لَنَا ؕ فَلَمَّا جَآءَهٗ وَقَصَّ عَلَيْهِ الْقَصَصَ ۙ قَالَ لَا تَخَفْ ٙ نَجَوْتَ مِنَ الْقَوْمِ الظّٰلِمِيْنَ ﴿۲۵﴾

25. (ಸ್ವಲ್ಪ ಹೊತ್ತಿನಲ್ಲೇ) ಆ ಇಬ್ಬರು ಮಹಿಳೆಯರಲ್ಲಿ ಒಬ್ಬಳು ಲಜ್ಜೆಯೊಂದಿಗೆ ನಡೆಯುತ್ತಾ ಅವರ ಬಳಿಗೆ ಬಂದಳು ಮತ್ತು, "ತಾವು ನಮಗಾಗಿ ಜಾನುವಾರುಗಳಿಗೆ ನೀರು ಕುಡಿಸಿದುದರ ಪ್ರತಿಫಲವನ್ನು ತಮಗೆ ಕೊಡಲಿಕ್ಕಾಗಿ ನನ್ನ ತಂದೆ ತಮ್ಮನ್ನು ಕರೆಯುತ್ತಿದ್ದಾರೆ" ಎಂದಳು. ಮೂಸಾ ಅವರ ಬಳಿಗೆ ತಲಪಿದಾಗ ಮತ್ತು ತಮ್ಮ ಸಂಪೂರ್ಣ ವೃತ್ತಾಂತವನ್ನು ಅವರಿಗೆ ಹೇಳಿ ತಿಳಿಸಿದಾಗ ಅವರು, "ಕೊಂಚವೂ ಹೆದರಬೇಡಿರಿ. ಈಗ ನೀವು ಅಕ್ರಮಿಗಳಿಂದ ಪಾರಾಗಿ ಬಿಟ್ಟಿದ್ದೀರಿ" ಎಂದರು.

قَالَتْ اِحْدٰىهُمَا يٰۤاَبَتِ اسْتَاْجِرْهُ ؗ اِنَّ خَيْرَ مَنِ اسْتَاْجَرْتَ الْقَوِيُّ الْاَمِيْنُ ﴿۲۶﴾

26. ಆ ಇಬ್ಬರು ಮಹಿಳೆಯರಲ್ಲಿ ಒಬ್ಬಳು ತನ್ನ ತಂದೆಯೊಡನೆ, "ಅಪ್ಪಾ ಇವರನ್ನು ನೌಕರನಾಗಿ ಇರಿಸಿಕೊಳ್ಳಿರಿ. ನೀವು ನೌಕರನಾಗಿ ಇರಿಸಿಕೊಳ್ಳುವವನು ಬಲಿಷ್ಠನೂ ಪ್ರಾಮಾಣಿಕನೂ ಆಗಿರಬೇಕಲ್ಲವೇ" ಎಂದಳು.

قَالَ اِنِّيْۤ اُرِيْدُ اَنْ اُنْكِحَكَ اِحْدَى ابْنَتَيَّ هٰتَيْنِ عَلٰۤى اَنْ تَاْجُرَنِيْ ثَمٰنِيَ حِجَجٍ ۚ فَاِنْ اَتْمَمْتَ عَشْرًا فَمِنْ عِنْدِكَ ۚ وَمَاۤ اُرِيْدُ اَنْ اَشُقَّ عَلَيْكَ ؕ سَتَجِدُنِيْۤ اِنْ شَآءَ اللّٰهُ مِنَ الصّٰلِحِيْنَ ﴿۲۷﴾

27. ಅವಳ ತಂದೆಯು (ಮೂಸಾರೊಡನೆ), "ನೀವು ಎಂಟು ವರ್ಷಗಳ ವರೆಗೆ ನನ್ನಲ್ಲಿ ನೌಕರಿ ಮಾಡಬೇಕೆಂಬ ಶರತ್ತಿನ ಮೇಲೆ ನಾನು ನನ್ನ ಈ ಇಬ್ಬರು ಪುತ್ರಿಯರಲ್ಲಿ ಒಬ್ಬಳನ್ನು ನಿಮಗೆ ವಿವಾಹ ಮಾಡಿಸಲಿಚ್ಛಿಸುತ್ತೇನೆ. ಇನ್ನು ನೀವು ಹತ್ತು ವರ್ಷ ಪೂರ್ತಿಗೊಳಿಸಿ ಬಿಟ್ಟರೆ ಅದು ನಿಮ್ಮಿಷ್ಟ. ನಾನು ನಿಮಗೆ ಕಷ್ಟಕೊಡಲಿಚ್ಛಿಸುವುದಿಲ್ಲ. ಅಲ್ಲಾಹನಿಚ್ಛಿಸಿದರೆ ನೀವು ನನ್ನನ್ನು ಸಜ್ಜನನಾಗಿ ಕಾಣುವಿರಿ" ಎಂದರು.

28. ಆಗ ಮೂಸಾ, "ಇದು ನನ್ನ ಮತ್ತು ನಿಮ್ಮ ನಡುವೆ ಇತ್ಯರ್ಥ ಗೊಂಡಿತು. ನಾನು ಈ ಎರಡು ಅವಧಿಗಳಲ್ಲಿ ಯಾವುದನ್ನೇ ಪೂರ್ತಿಗೊಳಿಸಿದರೂ ಆ ಬಳಿಕ ಬೇರೇನೂ ಅತಿರೇಕ ನನ್ನ ಮೇಲಾಗಬಾರದು. ನಾವು ಮಾಡುತ್ತಿರುವ ಈ ಎಲ್ಲ ಕರಾರುಗಳ ಬಗ್ಗೆ ಅಲ್ಲಾಹನು ಕಾವಲಾಗಿರುತ್ತಾನೆ" ಎಂದು ಉತ್ತರಿಸಿದರು.

قَالَ ذٰلِكَ بَيْنِيْ وَبَيْنَكَ ۭ اَيَّمَا الْاَجَلَيْنِ
قَضَيْتُ فَلَا عُدْوَانَ عَلَيَّ ۭ وَاللّٰهُ عَلٰي
مَا نَقُوْلُ وَكِيْلٌ ۝۲۸ ع

29. ಮೂಸಾ, ಅವಧಿ ಪೂರ್ತಿಗೊಳಿಸಿದ ನಂತರ ತಮ್ಮ ಕುಟುಂಬವನ್ನು ಕರೆದುಕೊಂಡು ಹೊರಟಾಗ ತೂರ್ ಪರ್ವತದ ಕಡೆ, ಅವರಿ ಗೊಂದು ಬೆಂಕಿ ಕಂಡಿತು. ಅವರು ಮನೆಯವರೊಡನೆ, "ನಿಲ್ಲಿರಿ, ನಾನೊಂದು ಬೆಂಕಿಯನ್ನು ಕಂಡಿದ್ದೇನೆ. ಪ್ರಾಯಶಃ ನಾನು ಅಲ್ಲಿಂದೇನಾದರೂ ಸುದ್ದಿ ತರಬಹುದು ಅಥವಾ ಆ ಬೆಂಕಿಯಿಂದ ಒಂದು ಕೆಂಡವನ್ನಾದರೂ ತರಬಹುದು. ಅದರಿಂದ ನೀವು ಚಳಿ ಕಾಯಿಸಿಕೊಳ್ಳಬಹುದು" ಎಂದರು.

فَلَمَّا قَضٰى مُوْسَى الْاَجَلَ وَسَارَ بِاَهْلِهٖٓ
اٰنَسَ مِنْ جَانِبِ الطُّوْرِ نَارًا ۚ قَالَ
لِاَهْلِهِ امْكُثُوْٓا اِنِّىْٓ اٰنَسْتُ نَارًا لَّعَلِّيْٓ
اٰتِيْكُمْ مِّنْهَا بِخَبَرٍ اَوْ جَذْوَةٍ مِّنَ
النَّارِ لَعَلَّكُمْ تَصْطَلُوْنَ ۝۲۹

30. ಅಲ್ಲಿಗೆ ತಲಪಿದಾಗ ಕಣಿವೆಯ ಬಲ ಬದಿಯ[7] ಮಂಗಳದಾಯಕ ಸ್ಥಳದಲ್ಲಿ ಒಂದು ಮರದಿಂದ ಹೀಗೆ ಕೂಗಲಾಯಿತು, "ಮೂಸಾ! ನಾನೇ ಅಲ್ಲಾಹ್, ಸರ್ವ ಲೋಕಗಳ ಪ್ರಭು"

فَلَمَّآ اَتٰىهَا نُوْدِيَ مِنْ شَاطِئِ الْوَادِ
الْاَيْمَنِ فِي الْبُقْعَةِ الْمُبٰرَكَةِ مِنَ
الشَّجَرَةِ اَنْ يّٰمُوْسٰٓي اِنِّىْٓ اَنَا اللّٰهُ
رَبُّ الْعٰلَمِيْنَ ۝۳۰

31. ಮತ್ತು "ನಿಮ್ಮ ಲಾಠಿಯನ್ನು ಎಸೆದು ಬಿಡಿರಿ" (ಎಂದು ಅಪ್ಪಣೆ ಯಾಯಿತು) ಆ ಲಾಠಿಯು ಹಾವಿನಂತೆ ತೆವಳುತ್ತಿರುವುದನ್ನು ಕಂಡೊಡನೆ ಮೂಸಾ ಬೆನ್ನು ತಿರುಗಿಸಿ ಓಟಕ್ಕಿತ್ತರು ಮತ್ತು ಅವರು ತಿರುಗಿಯೂ ನೋಡಲಿಲ್ಲ. (ಅಪ್ಪಣೆಯಾಯಿತು) "ಮೂಸಾ, ಮರಳಿ ಬನ್ನಿರಿ, ಹೆದರಬೇಡಿರಿ, ನೀವು ಸಂಪೂರ್ಣ ಸುರಕ್ಷಿತರಾಗಿದ್ದೀರಿ.

وَاَنْ اَلْقِ عَصَاكَ ۭ فَلَمَّا رَاٰهَا تَهْتَزُّ
كَاَنَّهَا جَاۗنٌّ وَّلّٰى مُدْبِرًا وَّلَمْ يُعَقِّبْ ۭ
يٰمُوْسٰٓي اَقْبِلْ وَلَا تَخَفْ ۣ اِنَّكَ
مِنَ الْاٰمِنِيْنَ ۝۳۱

32. ನಿಮ್ಮ ಕೈಯನ್ನು ಜೇಬಿನೊಳಗೆ ಹಾಕಿರಿ, ಅದು ಪ್ರಕಾಶಿಸುತ್ತಾ ನಿರಾಯಾಸವಾಗಿ ಹೊರಬರುವುದು ಮತ್ತು ಭೀತಿಯಿಂದ ಪಾರಾಗಲಿಕ್ಕಾಗಿ ನಿಮ್ಮ ಬಾಹುಗಳನ್ನು ಬಿಗಿದು ಕೊಳ್ಳಿರಿ[8] ನಿಮ್ಮ ಪ್ರಭುವಿನ ಕಡೆಯಿಂದ ಫಿರ್‌ಔನ್ ಮತ್ತು ಅವನ ಆಸ್ಥಾನಿಗರ ಮುಂದಿಡಲಿಕ್ಕಾಗಿ, ಇವೆರಡು ಪ್ರತ್ಯಕ್ಷ ನಿದರ್ಶನಗಳಾಗಿವೆ. ಅವರು ಮಹಾ ಆಜ್ಞೋಲ್ಲಂಘಕರಾಗಿದ್ದಾರೆ."

اُسْلُكْ يَدَكَ فِيْ جَيْبِكَ تَخْرُجْ بَيْضَاۗءَ
مِنْ غَيْرِ سُوْۗءٍ ۡ وَّاضْمُمْ اِلَيْكَ جَنَاحَكَ
مِنَ الرَّهْبِ فَذٰنِكَ بُرْهَانٰنِ مِنْ
رَّبِّكَ اِلٰى فِرْعَوْنَ وَمَلَا۟ىِٕهٖ ۭ اِنَّهُمْ
كَانُوْا قَوْمًا فٰسِقِيْنَ ۝۳۲

7. ಅರ್ಥಾತ್- ಮೂಸಾರ(ಅ) ಬಲಬದಿ.

8. ಅರ್ಥಾತ್- ನಿಮ್ಮ ಮನಸ್ಸಿನಲ್ಲಿ ಭಯ ಉಂಟು ಮಾಡುವಂತಹ ಯಾವುದೇ ಅಪಾಯಕರ ಸಂದರ್ಭ ಎದುರಾದಾಗ ನಿಮ್ಮ ಬಾಹುವನ್ನು ಬಿಗಿದುಕೊಳ್ಳಿರಿ. ಇದರಿಂದ ನಿಮ್ಮ ಹೃದಯ ಬಲಗೊಳ್ಳುವುದು. ಭಯಾತಂಕದ ಯಾವುದೇ ಭಾವನೆ ನಿಮ್ಮೊಳಗೆ ಬಾಕಿಯುಳಿಯಲಾರದು.

33. ಆಗ ಮೂಸಾ ಭಿನ್ನವಿಸಿದರು, "ನನ್ನ ಪ್ರಭೂ, ನಾನು ಅವರ ಒಬ್ಬ ವ್ಯಕ್ತಿಯನ್ನು ಕೊಲೆ ಮಾಡಿದ್ದೇನೆ. ಅವರು ನನ್ನನ್ನು ಕೊಂದು ಹಾಕುವರೆಂದು ನನಗೆ ಭಯವಿದೆ.

قَالَ رَبِّ إِنِّي قَتَلْتُ مِنْهُمْ نَفْسًا فَأَخَافُ أَن يَقْتُلُونِ ٣٣

34. ನನ್ನ ಸಹೋದರ ಹಾರೂನರು ನನಗಿಂತ ಉತ್ತಮ ಮಾತುಗಾರ. ಅವರು ನನ್ನನ್ನು ಸಮರ್ಥಿಸುವಂತೆ ಅವರನ್ನು ಸಹಾಯಕನಾಗಿ ನನ್ನ ಜೊತೆ ಕಳುಹಿಸು, ಆ ಜನರು ನನ್ನನ್ನು ಸುಳ್ಳಾಗಿಸುವರೆಂಬ ಆಶಂಕೆ ನನಗಿದೆ."

وَأَخِي هَارُونُ هُوَ أَفْصَحُ مِنِّي لِسَانًا فَأَرْسِلْهُ مَعِيَ رِدْءًا يُصَدِّقُنِي إِنِّي أَخَافُ أَن يُكَذِّبُونِ ٣٤

35. ಆಗ, "ನಿಮ್ಮ ಸಹೋದರನ ಮುಖಾಂತರ ನಾವು ನಿಮಗೆ ಬೆಂಬಲ ನೀಡುವೆವು ಮತ್ತು ಅವರು ನಿಮಗೇನೂ ಹಾನಿ ಮಾಡಲಾಗದಂತಹ ವರ್ಚಸ್ಸನ್ನು ನಿಮಗಿಬ್ಬರಿಗೂ ದಯಪಾಲಿಸುವೆವು. ನಮ್ಮ ನಿದರ್ಶನಗಳ ಬಲದಿಂದ ವಿಜಯವು ನಿಮ್ಮ ಹಾಗೂ ನಿಮ್ಮ ಅನುಯಾಯಿಗಳದ್ದೇ ಆಗಿರುವುದು" ಎಂದು (ಅಲ್ಲಾಹನು) ಹೇಳಿದನು.

قَالَ سَنَشُدُّ عَضُدَكَ بِأَخِيكَ وَنَجْعَلُ لَكُمَا سُلْطَانًا فَلَا يَصِلُونَ إِلَيْكُمَا ۚ بِآيَاتِنَا أَنتُمَا وَمَنِ اتَّبَعَكُمَا الْغَالِبُونَ ٣٥

36. ತರುವಾಯ ಮೂಸಾ ನಮ್ಮ ಸುವ್ಯಕ್ತ ನಿದರ್ಶನಗಳೊಂದಿಗೆ ಅವರ ಬಳಿಗೆ ತಲಪಿದರು. ಆಗ ಅವರು, "ಇದು ಕೃತಕ ಜಾದುವೇ ಹೊರತು ಬೇರೇನೂ ಅಲ್ಲ ಮತ್ತು ನಾವು ಇಂತಹ ಮಾತುಗಳನ್ನು ನಮ್ಮ ಪೂರ್ವಿಕರ ಕಾಲದಲ್ಲಿ ಎಂದೂ ಕೇಳಿರಲಿಲ್ಲ" ಎಂದರು.

فَلَمَّا جَاءَهُم مُّوسَىٰ بِآيَاتِنَا بَيِّنَاتٍ قَالُوا مَا هَٰذَا إِلَّا سِحْرٌ مُّفْتَرًى وَمَا سَمِعْنَا بِهَٰذَا فِي آبَائِنَا الْأَوَّلِينَ ٣٦

37. ಮೂಸಾ ಹೀಗೆಂದರು, "ನನ್ನ ಪ್ರಭು ತನ್ನ ವತಿಯಿಂದ ಮಾರ್ಗದರ್ಶನ ಪಡೆದು ಬಂದಿರುವವನನ್ನು ಚೆನ್ನಾಗಿ ಬಲ್ಲನು. ಯಾರ ಅಂತಿಮ ಪರಿಣಾಮವು ಉತ್ತಮವಾಗಬೇಕಾಗಿದೆ ಎಂಬುದನ್ನೂ ಅವನೇ ಚೆನ್ನಾಗಿ ತಿಳಿದಿರುವನು. ವಾಸ್ತವದಲ್ಲಿ ಅಕ್ರಮಿಗಳು ಎಂದೂ ಯಶಸ್ವಿಯಾಗುವುದಿಲ್ಲ."

وَقَالَ مُوسَىٰ رَبِّي أَعْلَمُ بِمَن جَاءَ بِالْهُدَىٰ مِنْ عِندِهِ وَمَن تَكُونُ لَهُ عَاقِبَةُ الدَّارِ ۖ إِنَّهُ لَا يُفْلِحُ الظَّالِمُونَ ٣٧

38. ಫಿರ್‌ಔನನು, "ಆಸ್ಥಾನಿಕರೇ ನನ್ನ ಹೊರತು ನಿಮ್ಮ ಇನ್ನಾವ ದೇವನನ್ನೂ ನಾನರಿಯೆನು. ಹಾಮಾನ್! ಇಟ್ಟಿಗೆಗಳನ್ನು ಸುಟ್ಟು ನನಗಾಗಿ ಒಂದು ಎತ್ತರವಾದ ಕಟ್ಟಡವನ್ನು ನಿರ್ಮಿಸು. ಬಹುಶಃ ಅದರ ಮೇಲೇರಿದರೆ ನನಗೆ ಮೂಸಾರ ದೇವರು ಕಾಣಿಸಲೂ ಬಹುದು, ನಾನಂತೂ ಇವನನ್ನು ಸುಳ್ಳುಗಾರನೆಂದು ಭಾವಿಸುತ್ತೇನೆ" ಎಂದನು.

وَقَالَ فِرْعَوْنُ يَا أَيُّهَا الْمَلَأُ مَا عَلِمْتُ لَكُم مِّنْ إِلَٰهٍ غَيْرِي فَأَوْقِدْ لِي يَا هَامَانُ عَلَى الطِّينِ فَاجْعَل لِّي صَرْحًا لَّعَلِّي أَطَّلِعُ إِلَىٰ إِلَٰهِ مُوسَىٰ وَإِنِّي لَأَظُنُّهُ مِنَ الْكَاذِبِينَ ٣٨

39. ಅವನೂ ಅವನ ಸೇನೆಗಳೂ ಭೂಮಿಯಲ್ಲಿ ಯಾವ ಹಕ್ಕೂ ಇಲ್ಲದೆ ಅಹಂಭಾವ ತೋರಿದರು ಮತ್ತು ಅವರಿಗೆಂದೂ ನಮ್ಮ ಬಳಿ ಮರಳಲಿಕ್ಕಿಲ್ಲವೆಂದೇ ತಿಳಿದುಕೊಂಡರು.

وَاسْتَكْبَرَ هُوَ وَجُنُودُهُ فِي الْأَرْضِ
بِغَيْرِ الْحَقِّ وَظَنُّوا أَنَّهُمْ إِلَيْنَا
لَا يُرْجَعُونَ ﴿٣٩﴾

40. ಕೊನೆಗೆ ನಾವು ಅವನನ್ನೂ ಅವನ ಸೇನೆಗಳನ್ನೂ ಹಿಡಿದೆವು ಮತ್ತು ಸಮುದ್ರಕ್ಕೆ ಎಸೆದು ಬಿಟ್ಟೆವು. ಆ ಅಕ್ರಮಿಗಳ ಗತಿಯೇ ನಾಯಿತೆಂಬುದನ್ನು ನೋಡಿರಿ.

فَأَخَذْنَاهُ وَجُنُودَهُ فَنَبَذْنَاهُمْ فِي الْيَمِّ ۖ
فَانْظُرْ كَيْفَ كَانَ عَاقِبَةُ الظَّالِمِينَ ﴿٤٠﴾

41. ನಾವು ಅವರನ್ನು ನರಕದ ಕಡೆಗೆ ಆಹ್ವಾನಿಸುವ ಮುಂದಾಳು ಗಳನ್ನಾಗಿ ಮಾಡಿದೆವು ಮತ್ತು ಅವರು ಪುನರುತ್ಥಾನ ದಿನ ಎಲ್ಲಿಂದಲೂ ಯಾವ ಸಹಾಯವನ್ನೂ ಪಡೆಯಲಾರರು.

وَجَعَلْنَاهُمْ أَئِمَّةً يَدْعُونَ إِلَى النَّارِ ۖ
وَيَوْمَ الْقِيَامَةِ لَا يُنْصَرُونَ ﴿٤١﴾

42. ನಾವು ಈ ಲೋಕದಲ್ಲಿ ಅವರ ಹಿಂದೆ ಶಾಪವನ್ನಿರಿಸಿದ್ದೇವೆ ಮತ್ತು ಪುನರುತ್ಥಾನ ದಿನ ಅವರು ಮಹಾ ಹಾನಿಗೊಳಗಾಗುವರು.

وَأَتْبَعْنَاهُمْ فِي هَٰذِهِ الدُّنْيَا لَعْنَةً ۖ وَ
يَوْمَ الْقِيَامَةِ هُمْ مِنَ الْمَقْبُوحِينَ ﴿٤٢﴾

43. ಹಿಂದಿನ ಪೀಳಿಗೆಗಳನ್ನು ನಾಶಗೊಳಿಸಿದ ಬಳಿಕ ನಾವು ಜನರಿಗೆ ಸತ್ಯದರ್ಶನದ ಸಾಧನವಾಗಿಯೂ ಮಾರ್ಗದರ್ಶನ ಮತ್ತು ಅನುಗ್ರಹ ವಾಗಿಯೂ ಮೂಸಾರಿಗೆ ಗ್ರಂಥವನ್ನು ದಯಪಾಲಿಸಿದೆವು- ಜನರು ಪಾಠ ಕಲಿಯುವಂತಾಗಲೆಂದು.

وَلَقَدْ آتَيْنَا مُوسَى الْكِتَابَ مِنْ بَعْدِ
مَا أَهْلَكْنَا الْقُرُونَ الْأُولَىٰ بَصَائِرَ
لِلنَّاسِ وَهُدًى وَرَحْمَةً لَعَلَّهُمْ يَتَذَكَّرُونَ ﴿٤٣﴾

44. (ಮುಹಮ್ಮದ್‌ರೇ!) ನಾವು ಮೂಸಾರಿಗೆ ಈ ಧರ್ಮಾದೇಶವನ್ನು ನೀಡಿದಾಗ ನೀವು ಪಶ್ಚಿಮ ಭಾಗದಲ್ಲಿರಲಿಲ್ಲ[9] ಮತ್ತು ನೀವು ಸಾಕ್ಷಿದಾರರಲ್ಲೂ ಸೇರಿರಲಿಲ್ಲ,

وَمَا كُنْتَ بِجَانِبِ الْغَرْبِيِّ إِذْ قَضَيْنَا
إِلَىٰ مُوسَى الْأَمْرَ وَمَا كُنْتَ مِنَ الشَّاهِدِينَ ﴿٤٤﴾

45. ಅಲ್ಲದೆ ಆ ಬಳಿಕ (ನಿಮ್ಮ ಕಾಲದ ವರೆಗೆ) ನಾವು ಅನೇಕ ಪೀಳಿಗೆ ಗಳನ್ನು ಎಬ್ಬಿಸಿದೆವು ಮತ್ತು ಅವರ ಮೇಲೆ ದೀರ್ಘಕಾಲ ಕಳೆದು ಹೋಗಿದೆ. ಮದ್‌ಯನ್‌ನವರಿಗೆ ನಮ್ಮ ಸೂಕ್ತಗಳನ್ನು ಕೇಳಿಸಲು ನೀವು ಅವರ ಮಧ್ಯೆಯೂ ಇರಲಿಲ್ಲ. ವಾಸ್ತವದಲ್ಲಿ (ಆ ಕಾಲದ ಸುದ್ದಿಗಳನ್ನು) ಕಳುಹಿಸುವವರು ನಾವೇ ಆಗಿರುತ್ತೇವೆ.

وَلَٰكِنَّا أَنْشَأْنَا قُرُونًا فَتَطَاوَلَ عَلَيْهِمُ
الْعُمُرُ ۚ وَمَا كُنْتَ ثَاوِيًا فِي أَهْلِ مَدْيَنَ
تَتْلُو عَلَيْهِمْ آيَاتِنَا ۙ وَلَٰكِنَّا كُنَّا مُرْسِلِينَ ﴿٤٥﴾

46. ನಾವು (ಮೂಸಾರನ್ನು ಪ್ರಥಮ ಬಾರಿ) ಕೂಗಿದಾಗ ನೀವು ತೂರ್ ಪರ್ವತದ ಮಗ್ಗುಲಲ್ಲೂ ಇರಲಿಲ್ಲ. ವಾಸ್ತವದಲ್ಲಿ ನಿಮಗಿಂತ ಮುಂಚೆ ಎಚ್ಚರಿಕೆ ನೀಡುವವರಾರೂ ಬಾರದಿದ್ದ ಜನರಿಗೆ ಎಚ್ಚರಿಕೆ ನೀಡಲಿಕ್ಕಾಗಿ ಇದು (ನಿಮಗೆ ಈ ತಿಳುವಳಿಕೆಯನ್ನು

وَمَا كُنْتَ بِجَانِبِ الطُّورِ إِذْ نَادَيْنَا
وَلَٰكِنْ رَحْمَةً مِنْ رَبِّكَ لِتُنْذِرَ قَوْمًا
مَا أَتَاهُمْ مِنْ نَذِيرٍ مِنْ قَبْلِكَ

9. ಪಶ್ಚಿಮ ಭಾಗ ಎಂದರೆ ಹಿಜಾಝ್‌ನ ಪಶ್ಚಿಮ ದಿಕ್ಕಿನಲ್ಲಿರುವ ಸೀನಾಯ್ ಪರ್ವತ.

لَعَلَّهُمْ يَتَذَكَّرُونَ ﴿٤٦﴾

ನೀಡಲಾಗುತ್ತಿರುವುದು) ನಿಮ್ಮ ಪ್ರಭುವಿನ ಕೃಪೆಯಾಗಿರುತ್ತದೆ. ಪ್ರಾಯಶಃ ಅವರು ಪ್ರಜ್ಞಾವಂತರಾಗಲೂ ಬಹುದು.

وَلَوْلَا أَن تُصِيبَهُم مُّصِيبَةٌ بِمَا قَدَّمَتْ
أَيْدِيهِمْ فَيَقُولُوا رَبَّنَا لَوْلَا أَرْسَلْتَ
إِلَيْنَا رَسُولًا فَنَتَّبِعَ آيَاتِكَ وَنَكُونَ
مِنَ الْمُؤْمِنِينَ ﴿٤٧﴾

47. ಅವರ ಸ್ವಂತ ದುಷ್ಕೃತ್ಯಗಳ ಫಲವಾಗಿ ಅವರ ಮೇಲೇನಾದರೂ ವಿಪತ್ತು ಬಂದಾಗ ಅವರು, "ಪ್ರಭೂ, ನಾವು ನಿನ್ನ ಸೂಕ್ತಗಳ ಅನುಸರಣೆ ಮಾಡುವಂತಾಗಲು ಹಾಗೂ ಸತ್ಯವಿಶ್ವಾಸಿಗಳಾಗು ವಂತಾಗಲು ನೀನು ನಮ್ಮ ಕಡೆಗೊಬ್ಬ ಸಂದೇಶವಾಹಕನನ್ನೇಕೆ ಕಳುಹಿಸಲಿಲ್ಲ?" ಎಂದು ಹೇಳುವಂತಾಗಬಾರದೆಂದು (ನಾವು ಹೀಗೆ ಮಾಡಿರುವೆವು.)

فَلَمَّا جَاءَهُمُ الْحَقُّ مِنْ عِندِنَا قَالُوا
لَوْلَا أُوتِيَ مِثْلَ مَا أُوتِيَ مُوسَىٰ ۚ أَوَلَمْ
يَكْفُرُوا بِمَا أُوتِيَ مُوسَىٰ مِن قَبْلُ ۖ
قَالُوا سِحْرَانِ تَظَاهَرَا وَقَالُوا
إِنَّا بِكُلٍّ كَافِرُونَ ﴿٤٨﴾

48. ಆದರೆ ನಮ್ಮ ಕಡೆಯಿಂದ ಅವರ ಬಳಿಗೆ ಸತ್ಯವು ಬಂದಾಗ ಅವರು, "ಮೂಸಾರಿಗೆ ಕೊಡಲಾಗಿದ್ದುದನ್ನೇ ಇವರಿಗೇಕೆ ಕೊಡ ಲಾಗಿಲ್ಲ?" ಎಂದು ಕೇಳ ತೊಡಗಿದರು. ಇದಕ್ಕಿಂತ ಮುಂಚೆ ಮೂಸಾರಿಗೆ ಕೊಡಲಾಗಿದ್ದುದನ್ನು ಇವರು ನಿರಾಕರಿಸಲಿಲ್ಲವೇ?[10] ಎರಡೂ[11] ಒಂದಿನ್ನೊಂದನ್ನು ಸಮರ್ಥಿಸುವ ಜಾದು ಆಗಿವೆ ಯೆಂದೂ ನಾವು ಯಾರನ್ನೂ ನಂಬುವುದಿಲ್ಲವೆಂದೂ ಅವರು ಹೇಳಿದರು.

قُلْ فَأْتُوا بِكِتَابٍ مِّنْ عِندِ اللَّهِ هُوَ
أَهْدَىٰ مِنْهُمَا أَتَّبِعْهُ إِن كُنتُمْ صَادِقِينَ ﴿٤٩﴾

49. (ಪ್ರವಾದಿಗಳೇ!) ನೀವು ಇವರೊಡನೆ,- "ಸರಿ, ನೀವು ಸತ್ಯ ವಾದಿಗಳಾಗಿದ್ದರೆ ಇವೆರಡಕ್ಕಿಂತಲೂ ಹೆಚ್ಚು ಸನ್ಮಾರ್ಗ ನೀಡತ ಕ್ಕಂತಹ ಒಂದು ಗ್ರಂಥವನ್ನು ಅಲ್ಲಾಹನ ಕಡೆಯಿಂದ ತನ್ನಿರಿ. ನಾನು ಅದರ ಅನುಸರಣೆಯನ್ನೇ ಮಾಡುವೆನು" ಎಂದು ಹೇಳಿರಿ.

فَإِن لَّمْ يَسْتَجِيبُوا لَكَ فَاعْلَمْ أَنَّمَا
يَتَّبِعُونَ أَهْوَاءَهُمْ ۚ وَمَنْ أَضَلُّ
مِمَّنِ اتَّبَعَ هَوَاهُ بِغَيْرِ هُدًى
مِّنَ اللَّهِ ۚ إِنَّ اللَّهَ لَا يَهْدِي
الْقَوْمَ الظَّالِمِينَ ﴿٥٠﴾

50. ಇನ್ನು ಅವರು ನಿಮ್ಮ ಬೇಡಿಕೆಯನ್ನು ಪೂರ್ತಿಗೊಳಿಸದಿದ್ದರೆ ವಾಸ್ತವದಲ್ಲಿ ಅವರು ತಮ್ಮ ಸ್ವೇಚ್ಛೆಗಳ ದಾಸರಾಗಿದ್ದಾರೆಂದು ತಿಳಿದುಕೊಳ್ಳಿರಿ. ದೇವ ಮಾರ್ಗದರ್ಶನದ ಹೊರತು ಕೇವಲ ತನ್ನ ಸ್ವೇಚ್ಛೆಗಳನ್ನು ಅನುಸರಿಸುವವನಿಗಿಂತ ಹೆಚ್ಚು ದಾರಿಗೆಟ್ಟವನು ಇನ್ನಾರಿರಬಹುದು? ಅಲ್ಲಾಹನು ಇಂತಹ ಅಕ್ರಮಿಗಳಿಗೆ ಎಷ್ಟು ಮಾತ್ರಕ್ಕೂ ಸನ್ಮಾರ್ಗದರ್ಶನ ನೀಡುವುದಿಲ್ಲ.

وَلَقَدْ وَصَّلْنَا لَهُمُ الْقَوْلَ لَعَلَّهُمْ
يَتَذَكَّرُونَ ﴿٥١﴾

51. ಮತ್ತು ಅವರು ಅಲಕ್ಷ್ಯದಿಂದ ಎಚ್ಚರಗೊಳ್ಳಬೇಕೆಂದು ನಾವು ಅವರಿಗೆ ಸತತವಾಗಿ (ಉಪದೇಶದ) ಮಾತನ್ನು ತಲುಪಿಸಿದ್ದೇವೆ.

10. ಅರ್ಥಾತ್- ಮೂಸಾರಿಗೆ(ಅ) ನೀಡಲಾಗಿದ್ದಂತಹ ಪವಾಡಗಳನ್ನು ಮುಹಮ್ಮದ್‌ರಿಗೆ(ಸ) ಯಾಕೆ ನೀಡಲಾಗಿಲ್ಲವೆಂದು ಈಗ ಅವರು ಕೇಳುತ್ತಿದ್ದಾರೆ. ಆದರೆ ಮಕ್ಕಾದ ಸತ್ಯನಿಷೇಧಿಗಳು ಮೂಸಾರನ್ನು(ಅ) ಎಲ್ಲಿ ನಂಬಿದ್ದರು?

11. ಅರ್ಥಾತ್- ಕುರ್‌ಆನ್ ಮತ್ತು ತೌರಾತ್‌ಗಳೆರಡೂ.

52. ನಾವು ಇದಕ್ಕೆ ಮುಂಚೆ ಯಾರಿಗೆ ಗ್ರಂಥ ನೀಡಿದ್ದೆವೋ ಅವರು ಇದರ (ಕುರ್‌ಆನಿನ) ಮೇಲೆ ವಿಶ್ವಾಸವಿರಿಸುತ್ತಾರೆ[12]

الَّذِينَ آتَيْنَاهُمُ الْكِتَابَ مِنْ قَبْلِهِ
هُمْ بِهِ يُؤْمِنُونَ ﴿٥٢﴾

53. ಮತ್ತು ಇದನ್ನು ಅವರಿಗೆ ಓದಿ ಹೇಳಿದಾಗ ಅವರು, "ನಾವು ಇದರ ಮೇಲೆ ವಿಶ್ವಾಸವಿರಿಸಿದೆವು. ಇದು ನಿಜಕ್ಕೂ ನಮ್ಮ ಪ್ರಭುವಿನ ಕಡೆಯಿಂದ ಬಂದ ಸತ್ಯವೇ ಆಗಿರುತ್ತದೆ. ನಾವು ಮೊದಲೇ ಮುಸ್ಲಿಮರಾಗಿದ್ದೆವು" ಎನ್ನುತ್ತಾರೆ.

وَإِذَا يُتْلَىٰ عَلَيْهِمْ قَالُوا آمَنَّا بِهِ
إِنَّهُ الْحَقُّ مِنْ رَبِّنَا إِنَّا كُنَّا
مِنْ قَبْلِهِ مُسْلِمِينَ ﴿٥٣﴾

54. ಇವರಿಗೆ ಇವರ ಸತ್ಫಲವನ್ನು ಎರಡು ಬಾರಿ ಕೊಡಲಾಗುವುದು.[13] (ಇದು) ಇವರು ತೋರಿಸಿದ ಸ್ಥೈರ್ಯದ ಪ್ರತಿಫಲವಾಗಿದೆ. ಇವರು ಕೆಡುಕುಗಳನ್ನು ಒಳಿತಿನಿಂದ ದೂರೀಕರಿಸುತ್ತಾರೆ. ನಾವು ಇವರಿಗೆ ನೀಡಿರುವುದರಿಂದ ಖರ್ಚು ಮಾಡುತ್ತಾರೆ.

أُولَٰئِكَ يُؤْتَوْنَ أَجْرَهُمْ مَرَّتَيْنِ بِمَا
صَبَرُوا وَيَدْرَءُونَ بِالْحَسَنَةِ السَّيِّئَةَ
وَمِمَّا رَزَقْنَاهُمْ يُنْفِقُونَ ﴿٥٤﴾

55. ಇವರು ಅಸಂಗತ ಮಾತನ್ನು ಕೇಳಿದಾಗ, "ನಮ್ಮ ಕರ್ಮ ನಮಗೆ ನಿಮ್ಮ ಕರ್ಮ ನಿಮಗೆ, ನಿಮಗೆ ಸಲಾಮ್. ತಿಳಿಗೇಡಿಗಳಂತೆ ವರ್ತಿಸಲು ನಾವು ಸಿದ್ಧರಿಲ್ಲ"[14] ಎನ್ನುತ್ತಾ ದೂರ ಸರಿದು ಬಿಟ್ಟರು.

وَإِذَا سَمِعُوا اللَّغْوَ أَعْرَضُوا عَنْهُ وَ
قَالُوا لَنَا أَعْمَالُنَا وَلَكُمْ أَعْمَالُكُمْ
سَلَامٌ عَلَيْكُمْ لَا نَبْتَغِي الْجَاهِلِينَ ﴿٥٥﴾

56. ಪ್ರವಾದಿಗಳೇ, ನೀವಿಚ್ಛಿಸಿದವರಿಗೆ ಸನ್ಮಾರ್ಗ ನೀಡಲು ನಿಮ್ಮಿಂದಾಗದು. ಆದರೆ ಅಲ್ಲಾಹನು ತಾನಿಚ್ಛಿಸಿದವರಿಗೆ ಸನ್ಮಾರ್ಗ ನೀಡುತ್ತಾನೆ. ಅವನು ಸನ್ಮಾರ್ಗ ಸ್ವೀಕರಿಸುವವರನ್ನು ಚೆನ್ನಾಗಿ ಅರಿತಿರುತ್ತಾನೆ.

إِنَّكَ لَا تَهْدِي مَنْ أَحْبَبْتَ وَلَٰكِنَّ
اللَّهَ يَهْدِي مَنْ يَشَاءُ ۚ وَهُوَ أَعْلَمُ
بِالْمُهْتَدِينَ ﴿٥٦﴾

57. "ನಾವು ನಿಮ್ಮೊಂದಿಗೆ ಈ ಸನ್ಮಾರ್ಗದ ಅನುಸರಣೆಯನ್ನು ಸ್ವೀಕರಿಸಿಕೊಂಡರೆ ನಾವು ನಮ್ಮ ನಾಡಿನಿಂದ ಕಿತ್ತೊಗೆಯಲ್ಪಡುವೆವು"[15] ಎಂದು ಅವರು ಹೇಳುತ್ತಾರೆ. ಎಲ್ಲ ತರದ ಹಣ್ಣು

وَقَالُوا إِنْ نَتَّبِعِ الْهُدَىٰ مَعَكَ
نُتَخَطَّفْ مِنْ أَرْضِنَا ۚ أَوَلَمْ نُمَكِّنْ

12. ಗ್ರಂಥದವರಾದ ಯಹೂದಿಯರು ಮತ್ತು ಕ್ರೈಸ್ತರೆಲ್ಲರೂ ಇದರ ಮೇಲೆ ವಿಶ್ವಾಸವಿಡುತ್ತಾರೆಂದು ಇದರ ಅರ್ಥವಲ್ಲ. ಬದಲಾಗಿ ಇದು ಈ ಸೂಕ್ತದ ಅವತೀರ್ಣದ ಸಂದರ್ಭದಲ್ಲಿ ಸಂಭವಿಸಿದ ಘಟನೆಯ ಕಡೆಗಿರುವ ಸೂಚನೆ. ನೀವು ನಿಮ್ಮ ಮನೆಯ ಬಳಿ ಬಂದಿರುವ ಅನುಗ್ರಹವನ್ನು ನಿರಾಕರಿಸುತ್ತಿದ್ದೀರಿ. ಅದೇ ವೇಳೆ ಈ ಸುದ್ದಿ ತಲುಪಿದ ನಂತರ ದೂರದೂರದ ಜನರು ಅದರ ಬಳಿ ಬರುತ್ತಿದ್ದಾರೆ. ಅದರ ಮಹತ್ವವರಿತು ಅದರಿಂದ ಪ್ರಯೋಜನ ಪಡೆಯುತ್ತಿದ್ದಾರೆ ಎಂದು ಮಕ್ಕಾದವರಲ್ಲಿ ಒಂದು ರೀತಿಯ ಸಂಕೋಚವನ್ನು ಮೂಡಿಸುವುದು ಇದರ ಉದ್ದೇಶ. ಹಬಶ್‌ನಿಂದ (ಇಥಿಯೋಪಿಯಾ ಸುಮಾರು ಇಪ್ಪತ್ತು ಮಂದಿ ಕ್ರೈಸ್ತರು ಪ್ರವಾದಿವರ್ಯರ(ಸ) ಬಳಿ ಬಂದು ಅವರಿಂದ ಕುರ್‌ಆನನ್ನು ಆಲಿಸಿ ಇಸ್ಲಾಮ್ ಸ್ವೀಕಾರ ಮಾಡಿದ್ದರು. ಆ ಘಟನೆಯ ಕಡೆಗೇ ಇಲ್ಲಿ ಸೂಚಿಸಲಾಗಿದೆ.

13. ಅರ್ಥಾತ್- ಪೂರ್ವದ ಗ್ರಂಥಗಳ ಮೇಲೆ ವಿಶ್ವಾಸವಿಟ್ಟಿದ್ದಕ್ಕಾಗಿ ಒಂದು ಸತ್ಫಲ ಮತ್ತು ಕುರ್‌ಆನಿನ ಮೇಲೆ ವಿಶ್ವಾಸವಿಟ್ಟಿದ್ದಕ್ಕಾಗಿ ಇನ್ನೊಂದು ಸತ್ಫಲ.

14. ಅವರು ವಿಶ್ವಾಸವಿರಿಸಿದಾಗ ಅಬೂಜಹಲ್ ಅವರನ್ನು ಬಯ್ದನು. ಇದನ್ನೇ ಇಲ್ಲಿ ಪ್ರಸ್ತಾಪಿಸಲಾಗುತ್ತಿದೆ.

15. ಇದು ಇಸ್ಲಾಮ್ ಸ್ವೀಕರಿಸದಿರಲು ಕುರೈಶ್ ಸತ್ಯನಿಷೇಧಿಗಳು ಮುಂದಿಡುತ್ತಿದ್ದ ನೆಪ. ಅವರ ಮಾತಿನ ಇಂಗಿತವೇನೆಂದರೆ, ಇಂದು ನಾವು ಸಮಸ್ತ ಅರೇಬಿಯಾದ ಬಹುದೇವಾರಾಧಕರ ನಾಯಕರಾಗಿದ್ದೇವೆ. ಆದರೆ ನಾವು ಮುಹಮ್ಮದ್‌ರ(ಸ) ಮಾತು ಕೇಳಿದರೆ ಸಮಸ್ತ ಅರೇಬಿಯಾ ನಮ್ಮ ಶತ್ರುವಾಗಿ ಮಾರ್ಪಡುವುದು.

ಹಂಪಲುಗಳು ನಮ್ಮ ಕಡೆಯಿಂದ ಜೀವನಾಧಾರವಾಗಿ ಹರಿದು ಬರುವಂತಹ ಒಂದು ಶಾಂತಿಮಯ 'ಹರಮನ್ನು' (ಸನ್ಮಾನ್ಯಸ್ಥಳ) ನಾವು ಇವರಿಗೆ ವಾಸಸ್ಥಾನವಾಗಿ ಮಾಡಿಲ್ಲವೇ? ಆದರೆ ಇವರಲ್ಲಿ ಹೆಚ್ಚಿನವರು ತಿಳಿಯುವುದಿಲ್ಲ.[16]

لَّهُمْ حَرَمًا آمِنًا يُجْبَىٰ إِلَيْهِ ثَمَرَاتُ
كُلِّ شَيْءٍ رِّزْقًا مِّن لَّدُنَّا وَلَٰكِنَّ
أَكْثَرَهُمْ لَا يَعْلَمُونَ ﴿٥٧﴾

58. ತಮ್ಮ ಸಂಪತ್ಸೌಕರ್ಯಗಳ ಬಗ್ಗೆ ಅಹಂಭಾವ ಹೊಂದಿದ್ದ ಎಷ್ಟೋ ನಾಡುಗಳನ್ನು ನಾವು ನಾಶಗೊಳಿಸಿದ್ದೇವೆ. ಅದೋ ಅವರ ನಿವಾಸಗಳು ಪಾಳು ಬಿದ್ದಿರುವುದನ್ನು ನೋಡಿಕೊಳ್ಳಿರಿ. ಅವುಗಳಲ್ಲಿ ಅನಂತರ ಯಾರಾದರೂ ವಾಸಿಸಿದ್ದೇ ಅಪರೂಪ. ಕೊನೆಗೆ ನಾವೇ ಅವುಗಳ ವಾರೀಸುದಾರರಾದೆವು.[17]

وَكَمْ أَهْلَكْنَا مِن قَرْيَةٍ بَطِرَتْ
مَعِيشَتَهَا ۖ فَتِلْكَ مَسَاكِنُهُمْ لَمْ
تُسْكَن مِّن بَعْدِهِمْ إِلَّا قَلِيلًا ۖ وَ
كُنَّا نَحْنُ الْوَارِثِينَ ﴿٥٨﴾

59. ಅವರ ಕೇಂದ್ರದಲ್ಲಿ, ಅವರಿಗೆ ನಮ್ಮ ಸೂಕ್ತಗಳನ್ನು ಓದಿ ಹೇಳುವ ಸಂದೇಶವಾಹಕನೊಬ್ಬನನ್ನು ಕಳುಹಿಸುವ ವರೆಗೂ ನಿಮ್ಮ ಪ್ರಭು ನಾಡುಗಳನ್ನು ನಾಶಗೊಳಿಸುವವನಾಗಿರಲಿಲ್ಲ. ಆ ನಾಡುಗಳಲ್ಲಿರುವವರು ಅಕ್ರಮಿಗಳಾಗಿ ಬಿಡುವವರೆಗೂ ನಾವು ಅವುಗಳನ್ನು ನಾಶಗೊಳಿಸುವವರಾಗಿರಲಿಲ್ಲ.[18]

وَمَا كَانَ رَبُّكَ مُهْلِكَ الْقُرَىٰ حَتَّىٰ
يَبْعَثَ فِي أُمِّهَا رَسُولًا يَتْلُو عَلَيْهِمْ
آيَاتِنَا ۚ وَمَا كُنَّا مُهْلِكِي الْقُرَىٰ
إِلَّا وَأَهْلُهَا ظَالِمُونَ ﴿٥٩﴾

60. ನಿಮಗೆ ಕೊಡಲಾಗಿರುವುದೆಲ್ಲವೂ ಕೇವಲ ಲೌಕಿಕ ಜೀವನದ ಸಾಧನ ಹಾಗೂ ಅದರ ಅಲಂಕಾರವಾಗಿದೆ ಮತ್ತು ಅಲ್ಲಾಹನ ಬಳಿಯಲ್ಲಿರುವುದೆಲ್ಲವೂ ಇದಕ್ಕಿಂತ ಉತ್ತಮ ಹಾಗೂ ಶಾಶ್ವತವಾಗಿ ಉಳಿಯುವವುಗಳಾಗಿವೆ. ನೀವು ಬುದ್ಧಿಯನ್ನುಪಯೋಗಿಸುವುದಿಲ್ಲವೇ?

وَمَا أُوتِيتُم مِّن شَيْءٍ فَمَتَاعُ الْحَيَاةِ
الدُّنْيَا وَزِينَتُهَا ۚ وَمَا عِندَ اللَّهِ خَيْرٌ
وَأَبْقَىٰ ۚ أَفَلَا تَعْقِلُونَ ﴿٦٠﴾

61. ನಾವು ಒಬ್ಬನಿಗೆ ಉತ್ತಮ ವಾಗ್ದಾನ ಮಾಡಿದ್ದು, ಅದನ್ನವನು ಪಡೆಯಲಿರುವನು. ಇಂಥವನು, ನಾವು ಕೇವಲ ಲೌಕಿಕ ಜೀವನದ

أَفَمَن وَعَدْنَاهُ وَعْدًا حَسَنًا فَهُوَ
لَاقِيهِ كَمَن مَّتَّعْنَاهُ مَتَاعَ الْحَيَاةِ

16. ಇದು ಅವರ ನೆಪಗಳಿಗೆ ಅಲ್ಲಾಹನು ನೀಡಿರುವ ಮೊದಲನೇ ಉತ್ತರವಾಗಿದೆ. ಅರ್ಥಾತ್ ಶಾಂತಿಧಾಮವಾದ ಮತ್ತು ಕೇಂದ್ರೀಯ ಸ್ಥಾನವಾದ 'ಹರಮ್'ನಿಂದಾಗಿಯೇ ಇಂದು ಲೋಕದಾದ್ಯಂತದ ವ್ಯಾಪಾರಿ ಸರಕು ಮರಳುಗಾಡಿನ ಈ ಬರಡು ಕಣಿವೆಗೆ ಹರಿದು ಬರುತ್ತಿದೆ. ಇದರ ಶಾಂತಿ, ನೆಮ್ಮದಿ ಮತ್ತು ಕೇಂದ್ರೀಯತೆಗೆ ನಿಮ್ಮ ಜಾಣ್ಮೆ ಕಾರಣವೇ?

17. ಇದು ಅವರ ನೆಪಕ್ಕೆ ನೀಡಲಾದ ಎರಡನೆಯ ಉತ್ತರವಾಗಿದೆ. ಅರ್ಥಾತ್ ಯಾವ ಸಿರಿ-ಸಂಪತ್ತು ಮತ್ತು ಸುಭಿಕ್ಷೆಯ ಬಗ್ಗೆ ನೀವು ದುರಹಂಕಾರ ಪಡುತ್ತಿದ್ದೀರೋ ಮತ್ತು ಯಾವುದರ ನಷ್ಟದ ಭಯದಿಂದ ಸತ್ಯದಿಂದ ವಿಮುಖರಾಗಿ ಸತ್ಯನಿಷೇಧದಲ್ಲಿ ದೃಢವಾಗಿ ನಿಲ್ಲಬಯಸುತ್ತೀರೋ, ಆ ಅನುಗ್ರಹಗಳು ಒಂದೊಮ್ಮೆ ಆದ್, ಸಮೂದ್ ಮತ್ತು ಇತರ ಸಮುದಾಯಗಳಿಗೂ ಪ್ರಾಪ್ತವಿದ್ದುವು. ಹಾಗಿದ್ದರೂ ಅವು ಅವರನ್ನು ವಿನಾಶದಿಂದ ಸಂರಕ್ಷಿಸಿತೇ?

18. ಇದು ಅವರ ನೆಪದ ಮೂರನೆಯ ಉತ್ತರವಾಗಿದೆ. ಮೊದಲು ನಾಶ ಹೊಂದಿದ ಸಮುದಾಯಗಳ ಜನರು ಅಕ್ರಮಿಗಳಾಗಿ ಮಾರ್ಪಟ್ಟಿದ್ದರು. ಆದರೆ ವಿನಾಶಕ್ಕೆ ಮೊದಲು ಅಲ್ಲಾಹನು ಪ್ರವಾದಿಯನ್ನು ಕಳುಹಿಸುವ ಮೂಲಕ ಅವರಿಗೆ ಎಚ್ಚರಿಕೆ ನೀಡಿದನು. ಎಚ್ಚರಿಕೆಯಿಂದಲೂ ಅವರು ಪಥಭ್ರಷ್ಟತೆಯಿಂದ ಮುಕ್ತರಾಗದಿದ್ದಾಗ ಅವರನ್ನು ನಾಶಪಡಿಸಿದನು. ಇದೇ ಪರಿಸ್ಥಿತಿ ಈಗ ನಿಮಗೂ ಎದುರಾಗಿದೆ.

ಸಾಧನಗಳನ್ನು ನೀಡಿದ್ದು ಆ ಬಳಿಕ ಪರಲೋಕದಲ್ಲಿ ಶಿಕ್ಷೆಗಾಗಿ ಹಾಜರುಗೊಳಿಸಲ್ಪಡಲಿರುವ ವ್ಯಕ್ತಿಯಂತೆ ಆಗಬಲ್ಲನೇ?

ٱلدُّنْيَا ثُمَّ هُوَ يَوْمَ ٱلْقِيَٰمَةِ مِنَ ٱلْمُحْضَرِينَ ﴿٦١﴾

62. ಅವನು ಇವರನ್ನು ಕೂಗಿ ಕರೆದು, "ನೀವು ಕಲ್ಪಿಸಿಕೊಂಡಿದ್ದ ಆ ನನ್ನ ಸಹಭಾಗಿಗಳು ಎಲ್ಲಿದ್ದಾರೆ?" ಎಂದು ಕೇಳುವ ಆ ದಿನ(ವನ್ನು ಇವರು ಮರೆಯದಿರಲಿ).

وَيَوْمَ يُنَادِيهِمْ فَيَقُولُ أَيْنَ شُرَكَآءِىَ
ٱلَّذِينَ كُنتُمْ تَزْعُمُونَ ﴿٦٢﴾

63. ಈ ಮಾತು ಯಾರಿಗೆ ಅನ್ವಯಿಸುವುದೋ ಅವರು, "ನಮ್ಮ ಪ್ರಭೂ, ನಾವು ಖಂಡಿತವಾಗಿಯೂ ಇವರನ್ನೇ ದಾರಿಗೆಡಿಸಿದ್ದೆವು. ನಾವು ಸ್ವತಃ ದಾರಿಗೆಟ್ಟಂತೆಯೇ ಇವರನ್ನೂ ದಾರಿಗೆಡಿಸಿದ್ದೆವು.[19] ನಾವು ನಿನ್ನ ಮುಂದೆ ಹೊಣೆ ಮುಕ್ತತೆಯನ್ನು ಪ್ರಕಟಿಸುತ್ತೇವೆ. ಇವರು ನಮ್ಮ ಆರಾಧನೆಯನ್ನಂತು ಮಾಡುತ್ತಿರಲಿಲ್ಲ"[20] ಎಂದು ಹೇಳುವರು.

قَالَ ٱلَّذِينَ حَقَّ عَلَيْهِمُ ٱلْقَوْلُ رَبَّنَا
هَٰٓؤُلَآءِ ٱلَّذِينَ أَغْوَيْنَآ أَغْوَيْنَٰهُمْ كَمَا
غَوَيْنَا ۖ تَبَرَّأْنَآ إِلَيْكَ ۖ مَا كَانُوٓا۟
إِيَّانَا يَعْبُدُونَ ﴿٦٣﴾

64. ತರುವಾಯ ಇವರೊಡನೆ, "ನೀವೀಗ ನೀವು ನೇಮಿಸಿಕೊಂಡಿದ್ದ ಸಹಭಾಗಿಗಳನ್ನು ಕೂಗಿ ಕರೆಯಿರಿ" ಎನ್ನಲಾಗುವುದು. ಇವರು ಅವರನ್ನು ಕೂಗಿ ಕರೆಯುವರು. ಆದರೆ ಅವರು ಇವರಿಗೆ ಏನೂ ಉತ್ತರ ಕೊಡಲಾರರು ಮತ್ತು ಇವರು ಯಾತನೆಯನ್ನು ಕಣ್ಣಾರೆ ಕಾಣುವರು. ಅಕಟ! ಇವರು ಸನ್ಮಾರ್ಗ ಸ್ವೀಕರಿಸುವವರಾಗಿದ್ದರೆ!

وَقِيلَ ٱدْعُوا۟ شُرَكَآءَكُمْ فَدَعَوْهُمْ
فَلَمْ يَسْتَجِيبُوا۟ لَهُمْ وَرَأَوُا۟ ٱلْعَذَابَ ۚ
لَوْ أَنَّهُمْ كَانُوا۟ يَهْتَدُونَ ﴿٦٤﴾

65. ಅವನು ಇವರನ್ನು ಕೂಗಿ ಕರೆಯುವ ಹಾಗೂ "ನಿಮಗೆ ಕಳುಹಿಸಲಾಗಿದ್ದ ಸಂದೇಶವಾಹಕರಿಗೆ ನೀವೇನು ಉತ್ತರ ಕೊಟ್ಟಿದ್ದೀರಿ?" ಎಂದು ಕೇಳಲಿರುವ ಆ ದಿನ(ವನ್ನು ಇವರು ಮರೆತು ಬಿಡದಿರಲಿ)

وَيَوْمَ يُنَادِيهِمْ فَيَقُولُ مَاذَآ أَجَبْتُمُ
ٱلْمُرْسَلِينَ ﴿٦٥﴾

66. ಆಗ ಇವರಿಗೆ ಯಾವ ಉತ್ತರವೂ ಹೊಳೆಯಲಾರದು ಮತ್ತು ಇವರು ಪರಸ್ಪರರೊಡನೆ ಕೇಳಿಕೊಳ್ಳಲಿಕ್ಕೂ ಸಾಧ್ಯವಾಗದು.

فَعَمِيَتْ عَلَيْهِمُ ٱلْأَنۢبَآءُ يَوْمَئِذٍ فَهُمْ
لَا يَتَسَآءَلُونَ ﴿٦٦﴾

67. ಆದರೆ ಇಂದು ಪಶ್ಚಾತ್ತಾಪ ಪಟ್ಟು ಸತ್ಯವಿಶ್ವಾಸ ಸ್ವೀಕರಿಸಿ

فَأَمَّا مَن تَابَ وَءَامَنَ وَعَمِلَ صَٰلِحًا

19. ಅರ್ಥಾತ್- ಭೂಮಿಯಲ್ಲಿ ದೇವನಿಗೆ ಭಾಗೀದಾರರೆಂದು ಪರಿಗಣಿಸಲಾದ ಮಾನವರ ಮತ್ತು ಜಿನ್ನ್‌ಗಳ ಪೈಕಿಯ ಪಿಶಾಚಿಗಳು. ಅವರ ಮಾತಿನ ಆಧಾರದಲ್ಲಿ ಅಲ್ಲಾಹನ ಮತ್ತು ಪ್ರವಾದಿಯ ಮಾತನ್ನು ಉಲ್ಲಂಘಿಸಲಾಗಿತ್ತು. ಅವರ ಮೇಲಿನ ವಿಶ್ವಾಸದಿಂದ ಸನ್ಮಾರ್ಗವನ್ನು ಬಿಟ್ಟು ಜೀವನದ ತಪ್ಪು ಮಾರ್ಗಗಳನ್ನು ಅನುಸರಿಸಲಾಗಿತ್ತು. ಇಂತಹವರನ್ನು ಯಾರಾದರೂ ಆರಾಧ್ಯ ಅಥವಾ ಪ್ರಭು ಎಂದು ಕರೆದಿರಲಿ ಕರೆಯದೆ ಇರಲಿ ಅವರ ಅನುಸರಣೆ ಮತ್ತು ಆಜ್ಞಾಪಾಲನೆಯನ್ನು ದೇವನ ಅನುಸರಣೆ ಮತ್ತು ಆಜ್ಞಾಪಾಲನೆ ಮಾಡುವಂತೆ ಮಾಡಿದರೆ ಅವರನ್ನು ದೇವತ್ವದಲ್ಲಿ ಸಹಭಾಗಿಯೆಂದು ಪರಿಗಣಿಸಿದಂತೆಯೇ ಸರಿ.

20. ಅರ್ಥಾತ್- ಇವರು ನಮ್ಮ ದಾಸರಲ್ಲ. ಬದಲಾಗಿ ತಮ್ಮ ಚಿತ್ತದ ದಾಸ್ಯವನ್ನು ಸ್ವೀಕರಿಸಿದವರಾಗಿದ್ದಾರೆ.

ಸತ್ಕರ್ಮವೆಸಗಿದವನು ಅಲ್ಲಿ ತಾನು ವಿಜಯಿಗಳಲ್ಲಾಗುವೆನೆಂದು
ನಿರೀಕ್ಷಿಸಬಹುದು.

فَعَسَىٰٓ أَن يَكُونَ مِنَ ٱلْمُفْلِحِينَ ﴿٦٧﴾

68. ನಿಮ್ಮ ಪ್ರಭು ತಾನಿಚ್ಛಿಸಿದ್ದನ್ನು ಸೃಷ್ಟಿಸುತ್ತಾನೆ ಮತ್ತು (ಅವನು
ತಾನಿಚ್ಛಿಸಿದವರನ್ನು ತನ್ನ ಕಾರ್ಯಕ್ಕಾಗಿ ಸ್ವತಃ) ಆರಿಸಿಕೊಳ್ಳುತ್ತಾನೆ.
ಈ ಆಯ್ಕೆ ಇವರು ಮಾಡುವ ಕಾರ್ಯವಲ್ಲ. ಅಲ್ಲಾಹನು
ಪರಮ ಪಾವನನು ಮತ್ತು ಇವರು ಮಾಡುತ್ತಿರುವ
'ದೇವಸಹಭಾಗಿತ್ವ' ದಿಂದ ಬಹಳ ಉನ್ನತನಾಗಿರುತ್ತಾನೆ.

وَرَبُّكَ يَخْلُقُ مَا يَشَآءُ وَيَخْتَارُ ۗ مَا
كَانَ لَهُمُ ٱلْخِيَرَةُ ۚ سُبْحَٰنَ ٱللَّهِ وَتَعَٰلَىٰ
عَمَّا يُشْرِكُونَ ﴿٦٨﴾

69. ಇವರು ತಮ್ಮ ಹೃದಯಗಳಲ್ಲಿ ಬಚ್ಚಿಟ್ಟಿರುವುದನ್ನೂ ಪ್ರಕಟ
ಗೊಳಿಸುವುದನ್ನೂ ನಿಮ್ಮ ಪ್ರಭು ತಿಳಿದಿರುವನು.

وَرَبُّكَ يَعْلَمُ مَا تُكِنُّ صُدُورُهُمْ
وَمَا يُعْلِنُونَ ﴿٦٩﴾

70. ಅವನೇ ಏಕೈಕ ಅಲ್ಲಾಹ್. ಅವನ ಹೊರತು ಬೇರಾರೂ
ಉಪಾಸನೆಗೆ ಅರ್ಹರಿಲ್ಲ. ಈ ಲೋಕದಲ್ಲೂ ಪರಲೋಕದಲ್ಲೂ
ಸಕಲ ಸ್ತುತಿ ಸ್ತೋತ್ರಗಳು ಅವನಿಗೇ ಮೀಸಲು. ಪರಮಾಧಿಕಾರ
ಅವನದು. ನೀವೆಲ್ಲರೂ ಅವನ ಕಡೆಗೇ ಮರಳಿಸಲ್ಪಡಲಿರುವಿರಿ.

وَهُوَ ٱللَّهُ لَآ إِلَٰهَ إِلَّا هُوَ ۖ لَهُ ٱلْحَمْدُ
فِى ٱلْأُولَىٰ وَٱلْءَاخِرَةِ ۖ وَلَهُ ٱلْحُكْمُ
وَإِلَيْهِ تُرْجَعُونَ ﴿٧٠﴾

71. ಸಂದೇಶವಾಹಕರೇ, ಅಲ್ಲಾಹನು ಪುನರುತ್ಥಾನ ದಿನದ ವರೆಗೂ
ನಿಮ್ಮ ಮೇಲೆ ಶಾಶ್ವತವಾಗಿ ರಾತ್ರಿಯನ್ನೇ ಕವಿಸಿಬಿಟ್ಟರೆ, ನಿಮಗೆ
ಪ್ರಕಾಶವನ್ನು ತಂದು ಕೊಡಲು ಅಲ್ಲಾಹನ ಹೊರತು ಬೇರಾವ
ದೇವರು ತಾನೇ ಇದ್ದಾನೆಂದು ನೀವೆಂದಾದರೂ ಆಲೋಚಿಸಿರು
ವಿರಾ? ನೀವು ಆಲಿಸುತ್ತಿಲ್ಲವೇ? ಎಂದು ಇವರೊಡನೆ ಕೇಳಿರಿ.

قُلْ أَرَءَيْتُمْ إِن جَعَلَ ٱللَّهُ عَلَيْكُمُ
ٱلَّيْلَ سَرْمَدًا إِلَىٰ يَوْمِ ٱلْقِيَٰمَةِ مَنْ
إِلَٰهٌ غَيْرُ ٱللَّهِ يَأْتِيكُم بِضِيَآءٍ ۖ
أَفَلَا تَسْمَعُونَ ﴿٧١﴾

72. ಅಲ್ಲಾಹನು ನಿಮ್ಮ ಮೇಲೆ ಪುನರುತ್ಥಾನ ದಿನದ ವರೆಗೆ
ಶಾಶ್ವತವಾಗಿ ಹಗಲನ್ನೇ ಆವರಿಸಿ ಬಿಟ್ಟರೆ ನೀವು ವಿಶ್ರಾಂತಿ
ಪಡೆಯುವಂತಹ ರಾತ್ರಿಯನ್ನು ನಿಮಗೆ ತಂದು ಕೊಡಲು
ಅಲ್ಲಾಹನ ಹೊರತು ಬೇರಾವ ಆರಾಧ್ಯನು ತಾನೇ ಇದ್ದಾನೆಂದು
ನೀವೆಂದಾದರೂ ಆಲೋಚಿಸಿರುವಿರಾ? ನಿಮಗೆ ತೋರುವುದಿಲ್ಲವೇ?
ಎಂದು ಇವರೊಡನೆ ಕೇಳಿರಿ.

قُلْ أَرَءَيْتُمْ إِن جَعَلَ ٱللَّهُ عَلَيْكُمُ
ٱلنَّهَارَ سَرْمَدًا إِلَىٰ يَوْمِ ٱلْقِيَٰمَةِ مَنْ
إِلَٰهٌ غَيْرُ ٱللَّهِ يَأْتِيكُم بِلَيْلٍ تَسْكُنُونَ
فِيهِ ۖ أَفَلَا تُبْصِرُونَ ﴿٧٢﴾

73. ನೀವು ಕೃತಜ್ಞರಾಗುವಿರೆಂದು ನಿರೀಕ್ಷಿಸಿ, ನೀವು (ರಾತ್ರಿ ಕಾಲದಲ್ಲಿ)
ವಿಶ್ರಾಂತಿ ಪಡೆಯುವಂತೆಯೂ (ಹಗಲು ಹೊತ್ತಿನಲ್ಲಿ) ನಿಮ್ಮ
ಪ್ರಭುವಿನ ಅನುಗ್ರಹವನ್ನು ಅರಸುವಂತೆಯೂ ರಾತ್ರಿ ಹಗಲುಗಳನ್ನು
ಉಂಟು ಮಾಡಿದುದು ಅವನದೇ ಕೃಪೆಯಾಗಿದೆ.

وَمِن رَّحْمَتِهِۦ جَعَلَ لَكُمُ ٱلَّيْلَ
وَٱلنَّهَارَ لِتَسْكُنُوا۟ فِيهِ وَلِتَبْتَغُوا۟
مِن فَضْلِهِۦ وَلَعَلَّكُمْ تَشْكُرُونَ ﴿٧٣﴾

74. ಅವನು ಇವರನ್ನು ಕೂಗಿ ಕರೆದು, "ನೀವು ಕಲ್ಪಿಸಿಕೊಂಡಿದ್ದ ನನ್ನ ಸಹಭಾಗಿಗಳು ಎಲ್ಲಿದ್ದಾರೆ?" ಎಂದು ಕೇಳಲಿರುವ ಆ ದಿನ(ವನ್ನು ಇವರು ನೆನಪಿಟ್ಟುಕೊಂಡಿರಲಿ).

وَيَوْمَ يُنَادِيهِمْ فَيَقُولُ أَيْنَ شُرَكَآءِيَ
الَّذِينَ كُنتُمْ تَزْعُمُونَ ﴿٧٤﴾

75. ನಾವು ಪ್ರತಿಯೊಂದು ಸಮುದಾಯದಿಂದ ಒಬ್ಬ ಸಾಕ್ಷಿಯನ್ನು ಹೊರ ತೆಗೆದು, "ಈಗ ನಿಮ್ಮ ಪುರಾವೆ ತನ್ನಿರಿ" ಎಂದು ಹೇಳುವೆವು. ಆಗ ಸತ್ಯ ಅಲ್ಲಾಹನ ಕಡೆಗಿದೆಯೆಂದು ಇವರಿಗೆ ತಿಳಿದು ಬರುವುದು. ಇವರು ಸೃಷ್ಟಿಸಿಕೊಂಡಿರುವ ಎಲ್ಲಾ ಮಿಥ್ಯಗಳೂ ಮಾಯವಾಗಿ ಹೋಗುವುವು.

وَنَزَعْنَا مِن كُلِّ أُمَّةٍ شَهِيدًا فَقُلْنَا
هَاتُوا بُرْهَانَكُمْ فَعَلِمُوٓا أَنَّ الْحَقَّ لِلَّهِ
وَضَلَّ عَنْهُم مَّا كَانُوا يَفْتَرُونَ ﴿٧٥﴾

76. (ಇದೊಂದು ಘಟನೆ). ಕಾರೂನ್, ಮೂಸಾರ ಜನಾಂಗದ ಒಬ್ಬ ವ್ಯಕ್ತಿಯಾಗಿದ್ದನು. ಅವನು ತನ್ನ ಜನಾಂಗದ ವಿರುದ್ಧ ಬಂಡಾಯವೆದ್ದನು. ನಾವು ಅವನಿಗೆ ಅದೆಷ್ಟು ಭಂಡಾರಗಳನ್ನು ನೀಡಿದ್ದೆವೆಂದರೆ ಅವುಗಳ ಬೀಗದ ಕೈಗಳನ್ನು ಬಲಶಾಲಿಗಳ ಒಂದು ಸಮೂಹವು ಬಹಳ ಕಷ್ಟದಿಂದ ಎತ್ತಬಹುದಾಗಿತ್ತು. ಒಮ್ಮೆ ಅವನ ಜನಾಂಗದವರು ಅವನೊಡನೆ- "ಅಹಂಕಾರ ಪಡಬೇಡ. ಅಹಂಕಾರ ಪಡುವವರನ್ನು ಅಲ್ಲಾಹನು ಮೆಚ್ಚುವುದಿಲ್ಲ.

إِنَّ قَارُونَ كَانَ مِن قَوْمِ مُوسَىٰ فَبَغَىٰ
عَلَيْهِمْ ۖ وَآتَيْنَاهُ مِنَ الْكُنُوزِ مَآ إِنَّ
مَفَاتِحَهُ لَتَنُوٓأُ بِالْعُصْبَةِ أُولِي الْقُوَّةِ
إِذْ قَالَ لَهُ قَوْمُهُ لَا تَفْرَحْ إِنَّ
اللَّهَ لَا يُحِبُّ الْفَرِحِينَ ﴿٧٦﴾

77. ಅಲ್ಲಾಹನು ನಿನಗೆ ನೀಡಿರುವ ಸಂಪತ್ತಿನಿಂದ ನೀನು ಪರಲೋಕಗೃಹ ನಿರ್ಮಾಣ ಮಾಡುವ ಕುರಿತು ಚಿಂತಿಸು ಮತ್ತು ಇಹಲೋಕ ದಿಂದಲೂ ನಿನ್ನ ಪಾಲನ್ನು ಮರೆಯಬೇಡ. ಅಲ್ಲಾಹನು ನಿನಗೆ ಉಪಕಾರ ಮಾಡಿದಂತೆಯೇ ನೀನೂ ಪರೋಪಕಾರ ಮಾಡು ಮತ್ತು ಭೂಮಿಯಲ್ಲಿ ಕ್ಷೋಭೆಯನ್ನುಂಟು ಮಾಡಲು ಪ್ರಯತ್ನಿಸ ಬೇಡ. ಅಲ್ಲಾಹನು ಕ್ಷೋಭೆಯನ್ನುಂಟು ಮಾಡುವವರನ್ನು ಮೆಚ್ಚುವುದಿಲ್ಲ."

وَابْتَغِ فِيمَآ آتَاكَ اللَّهُ الدَّارَ الْآخِرَةَ
وَلَا تَنسَ نَصِيبَكَ مِنَ الدُّنْيَا وَ
أَحْسِن كَمَآ أَحْسَنَ اللَّهُ إِلَيْكَ وَلَا تَبْغِ
الْفَسَادَ فِي الْأَرْضِ ۖ إِنَّ اللَّهَ لَا
يُحِبُّ الْمُفْسِدِينَ ﴿٧٧﴾

78. ಅದಕ್ಕೆ ಅವನು, "ಇವೆಲ್ಲ ನನಗೆ ಪ್ರಾಪ್ತವಾಗಿರುವ ಜ್ಞಾನದಿಂದಾಗಿ ನನಗೆ ಒದಗಿವೆ" ಎಂದನು. ಅಲ್ಲಾಹನು ಇದಕ್ಕಿಂತ ಮುಂಚೆ ಅವನಿಗಿಂತಲೂ ಹೆಚ್ಚು ಶಕ್ತಿ ಹಾಗೂ ಜನಬಲವನ್ನು ಹೊಂದಿದ್ದ ವರನ್ನು ನಾಶಗೊಳಿಸಿರುವನೆಂಬುದು ಅವನಿಗೆ ತಿಳಿದಿರಲಿಲ್ಲವೇ? ಅಪರಾಧಿಗಳೊಡನೆ ಅವರ ಪಾಪಗಳ ಕುರಿತು ಪ್ರಶ್ನಿಸ ಲಾಗುವುದಿಲ್ಲ.[21]

قَالَ إِنَّمَآ أُوتِيتُهُ عَلَىٰ عِلْمٍ عِندِيٓ ۚ
أَوَلَمْ يَعْلَمْ أَنَّ اللَّهَ قَدْ أَهْلَكَ مِن
قَبْلِهِ مِنَ الْقُرُونِ مَنْ هُوَ أَشَدُّ مِنْهُ
قُوَّةً وَأَكْثَرُ جَمْعًا ۚ وَلَا يُسْأَلُ
عَن ذُنُوبِهِمُ الْمُجْرِمُونَ ﴿٧٨﴾

21. ಅರ್ಥಾತ್- ಅಪರಾಧಿಗಳು ನಾವು ಮಹಾ ಸಚ್ಚರಿತ ವ್ಯಕ್ತಿಗಳಾಗಿದ್ದೇವೆ ಎಂದೇ ವಾದಿಸುತ್ತಾರೆ, ತಮ್ಮೊಳಗೆ ಯಾವುದಾದರೂ ಕೆಡುಕು ಇದೆ ಎಂಬುದನ್ನು ಅವರು ಒಪ್ಪಿಕೊಳ್ಳುವುದಿಲ್ಲ. ಆದರೆ ಅವರಿಗೆ ನೀಡಲಾಗುವ ಶಿಕ್ಷೆ ಅವರ ತಪ್ಪೊಪ್ಪಿಗೆಯನ್ನು ಹೊಂದಿಕೊಂಡಿರುವುದಿಲ್ಲ. ಅವರನ್ನು ಹಿಡಿಯಲಾಗುವಾಗ ನಿಮ್ಮ ಪಾಪಗಳಾವುವು ಎಂದು ಕೇಳಿ ಹಿಡಿಯಲಾಗುವುದಿಲ್ಲ.

79. ಒಂದು ದಿನ ಅವನು ತನ್ನ ಜನಾಂಗದ ಮುಂದೆ ತನ್ನ ಸಂಪೂರ್ಣ ಠೀವಿಯೊಂದಿಗೆ ಹೊರಟನು. ಲೌಕಿಕ ಜೀವನವನ್ನು ಬಯಸುವವರು ಅವನನ್ನು ಕಂಡು "ಕಾರೂನನಿಗೆ ನೀಡಲಾಗಿರುವುದೇ ನಮಗೂ ಸಿಗುತ್ತಿದ್ದರೆ! ಎನ್ನ ತೊಡಗಿದರು. ಇವನು ಮಹಾ ಅದೃಷ್ಟಶಾಲಿ."

فَخَرَجَ عَلَىٰ قَوْمِهِ فِي زِينَتِهِ ۖ قَالَ الَّذِينَ يُرِيدُونَ الْحَيَاةَ الدُّنْيَا يَا لَيْتَ لَنَا مِثْلَ مَا أُوتِيَ قَارُونُ إِنَّهُ لَذُو حَظٍّ عَظِيمٍ ﴿٧٩﴾

80. ಆದರೆ ಜ್ಞಾನವಿದ್ದವರು, "ಅಯ್ಯೋ ನಿಮ್ಮ ಅವಸ್ಥೆಯೇ! ಸತ್ಯವಿಶ್ವಾಸವನ್ನು ಸ್ವೀಕರಿಸಿ, ಸತ್ಕರ್ಮವೆಸಗಿದವರಿಗೆ ಅಲ್ಲಾಹನ ಪುಣ್ಯಫಲವೇ ಮೇಲು. ಈ ಸಂಪತ್ತು, ಸಹನೆ ಯುಳ್ಳವರಿಗಲ್ಲದೆ ಬೇರಾರಿಗೂ ಸಿಗುವುದಿಲ್ಲ" ಎಂದು ಹೇಳಿದರು.

وَقَالَ الَّذِينَ أُوتُوا الْعِلْمَ وَيْلَكُمْ ثَوَابُ اللَّهِ خَيْرٌ لِّمَنْ آمَنَ وَعَمِلَ صَالِحًا ۚ وَلَا يُلَقَّاهَا إِلَّا الصَّابِرُونَ ﴿٨٠﴾

81. ಕೊನೆಗೆ ನಾವು ಅವನನ್ನೂ ಅವನ ಮನೆಯನ್ನೂ ನೆಲದೊಳಕ್ಕೆ ಹುದುಗಿಸಿ ಬಿಟ್ಟೆವು. ಆಗ ಅಲ್ಲಾಹನಿಗೆದುರು ಅವನ ನೆರವಿಗೆ ಬರಲು ಅವನಿಗೆ ಯಾವ ಸಹಾಯಕ ತಂಡವೂ ಇರಲಿಲ್ಲ ಮತ್ತು ಸ್ವತಃ ತನಗೆ ಸಹಾಯ ಮಾಡಿಕೊಳ್ಳಲಿಕ್ಕೂ ಅವನಿಂದಾಗಲಿಲ್ಲ.

فَخَسَفْنَا بِهِ وَبِدَارِهِ الْأَرْضَ فَمَا كَانَ لَهُ مِن فِئَةٍ يَنصُرُونَهُ مِن دُونِ اللَّهِ وَمَا كَانَ مِنَ الْمُنتَصِرِينَ ﴿٨١﴾

82. ನಿನ್ನೆಯ ವರೆಗೆ ಅವನ ಸ್ಥಾನಮಾನಕ್ಕೆ ಆಶೆಪಡುತ್ತಿದ್ದವರು, "ಅಯ್ಯೋ ಅಲ್ಲಾಹ್ ತನ್ನ ದಾಸರ ಪೈಕಿ ತಾನಿಚ್ಛಿಸಿದವರಿಗೆ ಜೀವನಾಧಾರವನ್ನು ಸಮೃದ್ಧವಾಗಿ ನೀಡುತ್ತಾನೆ ಮತ್ತು ತಾನಿಚ್ಛಿಸಿದವರಿಗೆ ಅದನ್ನು ಪರಿಮಿತವಾಗಿ ಕೊಡುತ್ತಾನೆಂಬುದನ್ನು ನಾವು ಮರೆತು ಬಿಟ್ಟಿದ್ದೆವು. ಅಲ್ಲಾಹನು ನಮ್ಮ ಮೇಲೆ ದಯೆ ತೋರದಿರು ತ್ತಿದ್ದರೆ ನಮ್ಮನ್ನೂ ನೆಲದಲ್ಲಿ ಹುದುಗಿಸಿ ಬಿಡುತ್ತಿದ್ದನು. ಅಯ್ಯೋ ಸತ್ಯನಿಷೇಧಿಗಳು ಯಶಸ್ವಿಯಾಗುವುದಿಲ್ಲ ವೆಂಬುದು ನಮಗೆ ಮರತೇ ಹೋಗಿತ್ತು" ಎಂದರು.

وَأَصْبَحَ الَّذِينَ تَمَنَّوْا مَكَانَهُ بِالْأَمْسِ يَقُولُونَ وَيْكَأَنَّ اللَّهَ يَبْسُطُ الرِّزْقَ لِمَن يَشَاءُ مِنْ عِبَادِهِ وَيَقْدِرُ ۖ لَوْلَا أَن مَّنَّ اللَّهُ عَلَيْنَا لَخَسَفَ بِنَا ۖ وَيْكَأَنَّهُ لَا يُفْلِحُ الْكَافِرُونَ ﴿٨٢﴾

83. ನಾವು ಆ ಪರಲೋಕದ[22] ಗೃಹವನ್ನು ಭೂಮಿಯಲ್ಲಿ ತಮ್ಮ ದೊಡ್ಡಸ್ತಿಕೆಯನ್ನು ಬಯಸದವರಿಗಾಗಿ ಹಾಗೂ ಕ್ಷೋಭೆಯನ್ನುಂಟು ಮಾಡಬಯಸದವರಿಗಾಗಿ ಕಾದಿರಿಸುವೆವು. ಅಂತಿಮ ವಿಜಯವು ಧರ್ಮನಿಷ್ಠರಿಗಾಗಿಯೇ ಇದೆ.

تِلْكَ الدَّارُ الْآخِرَةُ نَجْعَلُهَا لِلَّذِينَ لَا يُرِيدُونَ عُلُوًّا فِي الْأَرْضِ وَلَا فَسَادًا ۚ وَالْعَاقِبَةُ لِلْمُتَّقِينَ ﴿٨٣﴾

84. ಯಾರು ಒಳಿತಿನೊಂದಿಗೆ ಬರುವನೋ ಅವನಿಗಾಗಿ ಅದಕ್ಕಿಂತ ಉತ್ತಮ ಒಳಿತು ಇದೆ. ಇನ್ನು ಯಾರಾದರೂ ಕೆಡುಕುಗಳೊಂದಿಗೆ

مَن جَاءَ بِالْحَسَنَةِ فَلَهُ خَيْرٌ مِّنْهَا ۖ وَمَن جَاءَ بِالسَّيِّئَةِ فَلَا يُجْزَى الَّذِينَ عَمِلُوا

22. ಅರ್ಥಾತ್- ನೈಜ ಯಶಸ್ಸಿನ ತಾಣವಾದ ಸ್ವರ್ಗ.

السَّيِّاٰتِ اِلَّا مَا كَانُوۡا يَعۡمَلُوۡنَ ﴿۸۴﴾

ಬಂದರೆ, ಅವರು ಎಸಗುತ್ತಿದ್ದ ಕೆಡುಕುಗಳಿಗೆ ತಕ್ಕುದಾಗಿಯೇ ಪ್ರತಿಫಲ ಸಿಗುವುದು.

اِنَّ الَّذِىۡ فَرَضَ عَلَيۡكَ الۡقُرۡاٰنَ
لَرَآدُّكَ اِلٰى مَعَادٍ‌ؕ قُلْ رَّبِّىۡۤ اَعۡلَمُ
مَنۡ جَآءَ بِالۡهُدٰى وَمَنۡ هُوَ فِىۡ
ضَلٰلٍ مُّبِيۡنٍ ﴿۸۵﴾

85. ಪೈಗಂಬರರೇ, ನಿಮ್ಮ ಮೇಲೆ ಈ ಕುರ್‌ಆನನ್ನು ಕಡ್ಡಾಯಗೊಳಿಸಿರುವವನು[23] ನಿಮ್ಮನ್ನು ಖಂಡಿತ ಒಂದು ಅತ್ಯುತ್ತಮ ಪರಿಣಾಮಕ್ಕೆ ಮುಟ್ಟಿಸಲಿರುವನು. "ಸನ್ಮಾರ್ಗವನ್ನು ತೆಗೆದುಕೊಂಡು ಬಂದಿರುವವನು ಯಾರು ಮತ್ತು ಸುವ್ಯಕ್ತ ಪಥಭ್ರಷ್ಟತೆಯಲ್ಲಿ ಸಿಲುಕಿದವನಾರು ಎಂಬುದನ್ನು ನನ್ನ ಪ್ರಭು ಚೆನ್ನಾಗಿ ಬಲ್ಲನು" ಎಂದು ಇವರೊಡನೆ ಹೇಳಿ ಬಿಡಿರಿ.

وَمَا كُنۡتَ تَرۡجُوۡۤا اَنۡ يُّلۡقٰٓى اِلَيۡكَ
الۡكِتٰبُ اِلَّا رَحۡمَةً مِّنۡ رَّبِّكَ
فَلَا تَكُوۡنَنَّ ظَهِيۡرًا لِّلۡكٰفِرِيۡنَ ﴿۸۶﴾

86. ನಿಮ್ಮ ಮೇಲೆ ಗ್ರಂಥವು ಇಳಿಸಲ್ಪಡುವುದೆಂದು ನೀವು ಖಂಡಿತ ನಿರೀಕ್ಷಿಸಿರಲಿಲ್ಲ. ಇದು ಕೇವಲ ನಿಮ್ಮ ಪ್ರಭುವಿನ ಕೃಪೆಯಿಂದ (ನಿಮ್ಮ ಮೇಲೆ ಅವತೀರ್ಣಗೊಂಡಿದೆ.) ಆದುದರಿಂದ ನೀವು ಸತ್ಯನಿಷೇಧಿಗಳ ಸಹಕಾರಿಗಳಾಗಬೇಡಿರಿ.

وَلَا يَصُدُّنَّكَ عَنۡ اٰيٰتِ اللّٰهِ بَعۡدَ
اِذۡ اُنۡزِلَتۡ اِلَيۡكَ‌ وَادۡعُ اِلٰى رَبِّكَ‌
وَلَا تَكُوۡنَنَّ مِنَ الۡمُشۡرِكِيۡنَ‌ ﴿۸۷﴾

87. ಅಲ್ಲಾಹನ ಸೂಕ್ತಗಳು ನಿಮ್ಮ ಮೇಲೆ ಅವತೀರ್ಣಗೊಂಡರೆ ಸತ್ಯನಿಷೇಧಿಗಳು ಎಂದಿಗೂ ನಿಮ್ಮನ್ನು ಅವುಗಳಿಂದ ತಡೆಯದಿರಲಿ. ನಿಮ್ಮ ಪ್ರಭುವಿನ ಕಡೆಗೆ ಆಹ್ವಾನಿಸಿರಿ ಮತ್ತು ಎಷ್ಟು ಮಾತ್ರಕ್ಕೂ ಬಹುದೇವವಿಶ್ವಾಸಿಗಳಲ್ಲಾಗಬೇಡಿರಿ.

وَلَا تَدۡعُ مَعَ اللّٰهِ اِلٰهًا اٰخَرَ‌ۘ لَاۤ اِلٰهَ
اِلَّا هُوَ‌ كُلُّ شَىۡءٍ هَالِكٌ اِلَّا وَجۡهَهٗ‌ؕ
لَهُ الۡحُكۡمُ وَاِلَيۡهِ تُرۡجَعُوۡنَ ﴿۸۸﴾

88. ಅಲ್ಲಾಹನೊಂದಿಗೆ ಇತರ ಯಾವುದೇ ದೇವರನ್ನು ಪ್ರಾರ್ಥಿಸಬೇಡಿರಿ. ಅವನ ಹೊರತು ಬೇರಾವ ಆರಾಧ್ಯನೂ ಇಲ್ಲ. ಅವನ ಅಸ್ತಿತ್ವದ ಹೊರತು ಎಲ್ಲ ವಸ್ತುಗಳೂ ನಾಶ ಹೊಂದಲಿವೆ. ಸಾರ್ವಭೌಮತೆ ಅವನಿಗೇ ಮೀಸಲು ಮತ್ತು ನೀವೆಲ್ಲರೂ ಅವನ ಕಡೆಗೇ ಮರಳಲಿರುವಿರಿ.

---

23. ಅರ್ಥಾತ್- ಈ ಕುರ್‌ಆನನ್ನು ದೇವ ಸೃಷ್ಟಿಗಳಿಗೆ ತಲಪಿಸುವ, ಅದರ ಬೋಧನೆ ನೀಡುವ ಮತ್ತು ಅದರ ಮಾರ್ಗದರ್ಶನದಂತೆ ಲೋಕದ ಸುಧಾರಣೆ ಮಾಡುವ ಕರ್ತವ್ಯ ನಿಮ್ಮ ಮೇಲಿದೆ.